(ಸದನವು ಮಾನ್ಯ ಸದಸ್ಯರಾದ ಶ್ರೀ ಬೌಡರೆಡ್ಡಿರವರು ಮೇಲ್ಕಂಡ ಅವಧಿಯಲ್ಲಿ ಅಧಿವೇಶನಕ್ಕೆ ಗೈಹಾಜರಾಗಲು ಅನುಮತಿ ನೀಡಿತು.)

5. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ :(ಅ) ಬೆಂಗಳೂರು ನಗರದಲ್ಲಿ ಹೆಣ್ಣೂರು ಸುತ್ಮವಸ್ಥೆ ಹದಗೆಟ್ಟಿರುವ ಬಗ್ಗೆ.

+ ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :— ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿ ಮತ್ತೊಂದು ಕೊಲೆ ಸಂಭವಿಸಿದೆ. ಶನಿವಾರದಂದು ಶಿವಾಜಿನಗರದ ವೀಲರ್ ರಸ್ತೆಯಲ್ಲಿ ಒಬ್ಬ ಜುಯೆಲರ್ಸ್ ಮರ್ಡರ್ ಆಗಿದೆ. ಅದರ ಹಿಂದಿನ ದಿವಸ ಬಸವನಗುಡಿಯ ಮೊಹಮಡನ್ ಬ್ಲಾಕ್‌ನಲ್ಲಿ ಒಬ್ಬ ಮೆಡಿಕಲ್ ಸ್ಟೋರ್ಸ್ ಮಾಲೀಕನ ಹತ್ಯೆಯಾಗಿದೆ. ಇಡೀ ಬೆಂಗಳೂರು ನಗರ ತಲ್ಲಣಗೊಂಡಿದೆ ಎಂದು ಹೇಳಿದರೆ ತಪ್ಪಾಗಲಾರದು. ಮಾನ್ಯ ಅಧ್ಯಕ್ಷರೆ, ಒಂದು ಕಡೆ ಈ ರೀತಿ ದಿನಕ್ಕೊಂದು ಕೊಲೆ, ವಾರಕ್ಕೆ ಹತ್ತು ಅಪಹರಣ ಎಲ್ಲಾ ನಡೆಯುತ್ತಿರುವಾಗ ಸರ್ಕಾರದಿಂದ ಜನಸಾಮಾನ್ಯರಿಗೆ ಏನು ಮೆಸೇಜ್ ಬರುತ್ತಿದೆ ಎನ್ನುವುದು ಮುಖ್ಯ. ಈ ದೇಶದಲ್ಲಿ ಬಹಳ ದೊಡ್ಡ ಒಬ್ಬ ನಾಯಕರು ಇದ್ದರು. ಅವರು ಹೇಳಿದರು ಒಂದು ಸಲ. ``Corruption is a global phenomenon ಎಂದು." He is giving clean chit to the corrupt people ಅಂತ. ಅದಾದ ನಂತರ ಇನ್ನೊಬ್ಬ ನಾಯಕರು ಹೇಳಿದರು, ``Rape is a natural human instinct" ಎಂದು ಅಂತ. ಅವರಿಬ್ಬರಿಗೂ ನಾನೇನು ಕಡಿಮೆ ಅಂತ ನಮ್ಮ ರಾಜ್ಯದ ಗೃಹ ಸಚಿವರು ಹೇಳುತ್ತಿದ್ದಾರೆ" Crime is a natural phenomenon of any growing matropolis." ಎಂದು ಇದನ್ನು ಇವರು ಪತ್ರಿಕೆಯಲ್ಲಿ ಹೇಳುತ್ತಾರೆ.

Rape and murders are part and parcel of Metro life ಎಂದು ಹೇಳುತ್ತಾರೆ. What message the society will get; what message the culprits will get? ಈ ರೀತಿ ನಾವು ಹೇಳಿಕೆ ಕೊಡುವಾಗ, ರಾಜ್ಯ ಎಲ್ಲವನ್ನೂ ನಾವು ಕಂಡೋನ್ ಮಾಡುತ್ತೇವೆಂದರೆ ಆ ಪ್ರಜೆಗಳಲ್ಲಿ ಅದರಲ್ಲೂ ವಿಶೇಷವಾಗಿ, ಈ ರೀತಿ ಮೈಂಡ್‌ಸೆಟ್ ಇರುವಂತಹ ಜನರಲ್ಲಿ ಯಾವ ರೀತಿ ಒಂದು ಎಫೆಕ್ಟ್ ಆಗಬಹುದು ಎನ್ನುವುದನ್ನು ನಾವು ಯೋಚಿಸಬೇಕು. ನಾನು ಬೆಂಗಳೂರಿನಲ್ಲಿ ಹುಟ್ಟಿದ್ದು. ಗನ್ ಕಲ್ಚರ್ ಎಂಬುದನ್ನು ನಾನು ಕೇಳಿರಲಿಲ್ಲ. ಸುಪಾರಿ ಎನ್ನುವುದನ್ನು ಕೇಳಿರಲಿಲ್ಲ. ಅದರ ಬಗ್ಗೆ ಗೊತ್ತೇ ಇರಲಿಲ್ಲ. ಎಲ್ಲೋ ಓದಿದ್ದು, ಅದರ ಬಗ್ಗೆ ಕುತೂಹಲದಿಂದ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೆ. ಆದರೆ ಇವತ್ತು Gun culture has made a grandentry in this city of ours. ಭಯವಾಗುತ್ತದೆ. ಯಾವುದಾದರೊಂದು ಇಷ್ಯೂ ಮೇಲೆ ಇನ್ನು ಮುಂದೆ ಮಾತನಾಡುವುದಕ್ಕೆ ಜನ ಭಯಪಡಬಹುದು. ಗನ್ ಕಲ್ಚರ್ ಇದೆ. ಸುಪಾರಿ

ಕೂಡ ಇದೆ. ಆ ಒಂದು ಸ್ಥಿತಿಗೆ ಇವತ್ತು ಬೆಂಗಳೂರು ಬರುತ್ತಿದೆ. ನನಗೆ ಅನ್ನಿಸುವುದು, ಇವತ್ತಿನ ಕ್ರೈಮ್ ರೇಟ್ ನೋಡಿದಾಗ ಕೊಲೆಗಳು ಸುಲಿಗೆಗಳು, ಅಪಹರಣಗಳು ನೋಡಿದಾಗ, ಮನಸ್ಸಿನಲ್ಲಿ ಸಂಶಯ ಬರುವುದು What the Chief Minister proposes, Home Minister disposes" ಅಂತ. ಮುಖ್ಯಮಂತ್ರಿಗಳಿಗೆ ಒಂದು ಆಸೆ ಇದೆ. ಈ ಬೆಂಗಳೂರು ನಗರ ಬಹಳ ದೊಡ್ಡ ಸೆಂಟರ್ ಆಗಬೇಕು. ಎಲ್ಲರೂ ಬಂದು ಇಲ್ಲಿ ಇನ್‌ವೆಸ್ಟ್ ಮಾಡಬೇಕು. ಗ್ಲೋಬಲ್ ಇನ್‌ವೆಸ್ಟರ್ಸ್ ಮೀಟ್ ಮಾಡುತ್ತೇವೆ. ಇದೆಲ್ಲಾ ನಾವು ಜನರನ್ನು ಅಟ್ರಾಕ್ಟ್ ಮಾಡುವುದಕ್ಕೆ ಹೋದಾಗ ಈ ರೀತಿ ಕೊಲೆ, ಸುಲಿಗೆ ಆಗುತ್ತಿರುವಾಗ ಯಾರು ತಾನೆ ಎಡಗೈಯಲ್ಲಿ ಜೀವ ಇಟ್ಟುಕೊಂಡು ಬಂದು ಇಲ್ಲಿ ಇನ್‌ವೆಸ್ಟ್ ಮಾಡುತ್ತಾರೆ? Which enterpreneur will come forward? ಯಾರೇ ಉದ್ದಿಮೆಗಳು, ಯಾರೇ ಎಂಟರ್ ಪ್ರೈಸರ್‌ಗಳು, ಬೆಂಗಳೂರಿಗೆ ಬರಲು ಸಿದ್ಧರಿರುತ್ತಾರೆ. ಸರ್ಕಾರ ಇದರ ಬಗ್ಗೆ ಹಾಗು ಬೇರೆ ಬೇರೆ ಸಂಗತಿಗಳ ಬಗ್ಗೆ ಗಾಂಭೀರ್ಯದಿಂದ ನೋಡುತ್ತಿರುವಾಗ, ಇವತ್ತಿನ ಈ ಕ್ರೈಮ್ ರೇಟ್ ಬಗ್ಗೆ, ಆ ಸಾಮಾನ್ಯ ಜನಕ್ಕೆ ಏನು ಅಳಕು ಬಂದಿದೆ ಸಾಮಾನ್ಯ ಜನ ಎನು ಭಯಭೀತರಾಗಿದ್ದಾರೆ, ಹೊರಗಡೆ ಹೋದರೆ ಮನೆಗೆ ಬರುತ್ತಾರೋ ಇಲ್ಲವೋ, ಅಪಹರಣ ಆಗುತ್ತಾರೋ ಏನೋ ಎನ್ನುವ ಸ್ಥಿತಿಗೆ ಬಂದಿರುವಾಗ ಸರ್ಕಾರ ಇದರ ಬಗ್ಗೆ ಗಮನಹರಿಸುತ್ತಿದೆಯೇ? ಬೆಂಗಳೂರು ನಗರದ ಬಗ್ಗೆ ನಾವು ಹೇಳುತ್ತಿದ್ದೆವು. ತಮಗೇ ಗೊತ್ತು "Bangalore city is Pensioners' paradise."ಎಂದು. ಮೂರು ತಿಂಗಳ ಹಿಂದೆ ಸರಣಿ ಕೊಲೆ. ಯಾರದ್ದು? ಯಾರ್ಯಾರು ಒಬ್ಬಂಟಿಗರು ಮನೆಯಲ್ಲಿರುತ್ತಾರೆ ಅವರನ್ನು ಆರಿಸಿ, ಆರಿಸಿ, ಮರ್ಡರ್ ಮಾಡುವುದು ನಡೆದಿದೆ. This city is no more a garden city. ಇದು ಅಪಹರಣಗಳ ರಾಜ್ಯ, ಅಪಹರಣಗಳ ರಾಜಧಾನಿ. ಈ ರೀತಿ ಇರುವಾಗ ಒಂದು ಜವಾಬ್ದಾರಿಯುತ ಸರ್ಕಾರ ನಾನು ರಾಜ್ಯದಲ್ಲಿ ಆಡಳಿತ ನಡೆಸುತ್ತಿದ್ದೇನೆಂದು ಹೇಳಿಕೊಳ್ಳುತ್ತಿರುವ ಸರ್ಕಾರ, ತನ್ನ ಇರುವಿಕೆಯನ್ನು ಇವತ್ತು ತೋರಿಸಬೇಕು. ತನ್ನ ಇರುವಿಕೆಯನ್ನು ಇವತ್ತು ಪ್ರದರ್ಶನ ಮಾಡಬೇಕು. ಪರಿಸ್ಥಿತಿ ಹೀಗಿರುವಾಗ ನಾನು ಈ ಅಂಕಿಅಂಶಗಳನ್ನು ಹೇಳಿದ ತಕ್ಷಣ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಒಂದು ಅಂಕಿಅಂಶಗಳನ್ನು ಕೊಡುತ್ತಾರೆ. ಆ ವರ್ಷ ಅಷ್ಟು ಇತ್ತು ಈ ವರ್ಷ ಇಷ್ಟು ಇತ್ತು ಎಂದು ನಾನು ಪೂರ್ತಿ ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ನಾನು ಉತ್ತರ ಕೊಡುವುದಕ್ಕಿಂತ ಮುಂಚಿತವಾಗಿಯೇ ಹೇಳುತ್ತಿದ್ದೀರಿ.

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು) :— ನೀವು ನಿನ್ನೆ ಮೊನ್ನೆಯ ಅಂಕಿಅಂಶಗಳನ್ನು ಕೊಡುವುದು ತಮ್ಮ ಜವಾಬ್ದಾರಿ ಎಂದು ತಿಳಿದುಕೊಂಡಿದ್ದೀರಿ. ಆದರೆ ಈ ರಾಜ್ಯದ ಗೃಹ ಸಚಿವರು ಕಳೆದ 10 ವರ್ಷಗಳ ಅಂಕಿಅಂಶಗಳನ್ನು ಕೊಡಬೇಕು.

ಶ್ರೀ ಎಸ್. ಸುರೇಶ್ ಕುಮಾರ್:— ಮಾನ್ಯ ಅಧ್ಯಕ್ಷರೇ, ಅದಕ್ಕೆ ನಾನು ಒಂದು ಡಿಫೆನ್ಸ್ ಕೊಡುತ್ತಿದ್ದೇನೆ. ಇದು ಬಹಳ ಒಳ್ಳೆಯದು. ತಾವಿಬ್ಬರು ಮ್ಯೂಚುಯಲ್ ಆಗಿ ಡಿಫೆನ್ಸ್ ಮಾಡಿಕೊಳ್ಳುತ್ತಿದ್ದೀರಿ, ಬಹಳ ಒಳ್ಳೆಯದು.

ಶ್ರೀ ಎಸ್.ಎಂ. ಕೃಷ್ಣ:— ತಮಗೆ ಆಗುತ್ತಿರುವ ತೊಂದರೆಯೂ ಗೊತ್ತಿದೆ.

ಶ್ರೀ ಎಸ್. ಸುರೇಶ್ ಕುಮಾರ್:— ಗೊತ್ತಿದೆ. ಈಗ ತಾವು ಅಂಕಿಅಂಶಗಳನ್ನು ಕೊಡಬಹುದು. ತಾವು ಕೊಡುವ ಅಂಕಿ ಅಂಶಗಳಿಂದ ಈ ಸದನದಲ್ಲಿ ಯಾರದೋ ಕೆಲವರು ಬಾಯಿ ಮುಚ್ಚಿಸಬಹುದು. ಆದರೆ ಆ ಸಾಮನ್ಯ ಜನರಿಗೆ ಧೈರ್ಯ ಕೊಡುವುದಕ್ಕೆ ಆಗುತ್ತದೆಯೇ? ಇಲ್ಲಪ್ಪ ಈ ವರ್ಷ ಮರ್ಡರ್ಸ್ ಆಗಿದ್ದು, ಜನತಾದಳ ಸರ್ಕಾರವಿದ್ದಾಗ ಅಷ್ಟು ಮರ್ಡರ್ಸ್ ಆಗಿತ್ತು, ಎಂದು ಹೇಳಿದರೆ ಅದು ಯಾವುದೇ ರೀತಿಯಲ್ಲಿ ಸರಿಯಾದ ಉತ್ತರವಾಗುವುದಿಲ್ಲ. ಕಳೆದ ಆರು ತಿಂಗಳಲ್ಲಿ ಬೆಂಗಳೂರು ನಗರದಲ್ಲಿ 105 ಮರ್ಡರ್ಸ್ ಆಗಿದೆ ಎಂಬ ಅಂಕಿ ಅಂಶ ನನಲ್ಲಿದೆ. ಇದಕ್ಕೆ ಕಾರಣವೇನು? ಕಾರಣ ಒಂದೇ ನೋ ಡೌಟ್, ಬೆಂಗಳೂರಿನಲ್ಲಿರುವ ಪೋಲಿಸಿನವರು ಸಹ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ನಾವು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾ ಇರುತ್ತೇವೆ. ಆದರೆ ಬೆಂಗಳೂರು ನಗರದಲ್ಲಿರುವ ಪೋಲಿಸಿನವರು ತಮ್ಮ ಇರುವಿಕೆಯನ್ನು ಬೆಂಗಳೂರು ನಗರದಲ್ಲಿ ತೋರಿಸುತ್ತಿದ್ದಾರಾ? Is their presence felt in the city? Whether their presence has given a sort of confidence to the common man? ನನಗೆ ಅನ್ನಿಸುತ್ತಿರುವುದು ಇವತ್ತಿನ ಬೆಂಗಳೂರಿನ ವೈಖರಿ ನೋಡಿದರೆ, ಬೆಂಗಳೂರಿನ ಪೋಲೀಸರ ಚಟುವಟಿಕೆ ನೋಡಿದರೆ ಸಾಮಾನ್ಯ ಮನುಷ್ಯರಿಗೆ ವಿಶ್ವಾಸ ಬರುತ್ತಿಲ್ಲ. ಅಪರಾಧಿಗಳಿಗೆ ವಿಶ್ವಾಸ ಬರುತ್ತಿದೆ. ನಾವು ಅಪರಾಧ ಮಾಡಿ ಬಚಾವ್ ಆಗಬಹುದು, ನಾವು ಕೊಲೆ ಮಾಡಿ ತಪ್ಪಿಸಿಕೊಳ್ಳಬಹುದು ಎನ್ನುವ ಪರಿಸ್ಥಿತಿ ಬೆಂಗಳೂರುನಲ್ಲಿ ಬಂದರೆ ಯಾರಿಗೇ ಆಗಲಿ ಅದು ಸಮಾಧಾನ ಕೋಡುವುದಿಲ್ಲ. ನಾನು ಏತಕ್ಕೆ ಈ ಅಂಕಿ ಸಂಖ್ಯೆ ಬಗ್ಗೆ ಹೇಳಿದೆ ಎಂದರೆ, ಲಾಜಿಕ್ ಬಗ್ಗೆ ಒಂದು ಹೇಳಿಕೆ ಇದೆ. Logic can achieve anything, because it can achieve nothing. ನಾವು ಲಾಜಿಕ್ ನ್ನು ಯಾವುದಕ್ಕಾದರೂ ಉಪಟೋಗಿಸುತ್ತಾ ಹೋಗುತ್ತಿದ್ದೇವೆ. ಈ ಕಡೆಯೂ ಉಪಯೋಗಿಸಬಹುದು, ಆ ಕಡೆಯೂ ಕೂಡಬಹುದು. It is not the question of logic, it is not the question of statistics, it is the question of cold facts. ಇದು ಇವತ್ತು ಇರುವ ಪರಿಸ್ಥಿತಿ, ಈ ಬೆಂಗಳೂರು ನಗರದಲ್ಲಿ ಎಂಟು ಗಂಟೆ ಮೇಲೆ ಯಾರೂ ಕೂಡ ಅಂಗಡಿ ತೆಗೆಯುವ ಪರಿಸ್ಥಿತಿ ಇಲ್ಲ. ಹೀಗಿದ್ದರೆ ಓಡಾಡುವವರ ಪರಿಸ್ಥಿತಿ ಏನಾಗಬಹುದು, ಮನೆಯಲ್ಲಿ ಒಬ್ಬಂಟಿಗರು ಇದ್ದಾಗ ಅವರ ಮನೆ ಯಾವ ರೀತಿ ರಕ್ಷಣೆಯಾಗಬಹುದು, ಈ ಕಾರಣದಿಂದ I will charge the Government. ಇವರು ತಮ್ಮ ಜವಾಬ್ದಾರಿಯನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸುತ್ತಿಲ್ಲವೆಂದು ಜನರ ಪರವಾಗಿ

ನಾನು ಹೇಳುತ್ತಿದ್ದೇನೆ. ಇದನ್ನು ಇವರು ಮಾಡುತ್ತಿಲ್ಲ, ಬದಲಿಗೆ ನಾನು ಬೆಂಗಳೂರು ಸಿಟಿ ಪೋಲಿಸ್ ಕಮಿಷನರ್ ರವರ ಗಮನಕ್ಕೆ ಕೂಡ ತಂದಿದ್ದೇನೆ. ಒಂದಂಕಿ ಲಾಟರಿಯನ್ನು ಮೂರಂಕಿ ಲಾಟರಿ ಎಂದು ತೆಗೆದುಕೊಂಡು ಬರುತ್ತಾರೆ. ಅದು ಪೋಲಿಸ್ ಸ್ಟೇಷನ್ ಸರಹದ್ದಿನಲ್ಲಿ ನಡೆಯುತ್ತಿದೆ. ಪೋಲಿಸ್ ಸ್ಟೇಷನ್ ಅಕ್ಕ ಪಕ್ಕದಲ್ಲಿ ನಡೆಯುತ್ತದೆ. ಇದನ್ನು ನಿಲ್ಲಿಸುವುದಕ್ಕೆ ನಮಗೆ ಚೈತನ್ಯ ಇಲ್ಲ, ಕಾನೂನಿನ ತೊಡಕು ಇದೆ ಎಂದು ಹೇಳುತ್ತಾರೆ. These places have become the Criminal's Den. ಅದು ನೋಡುತ್ತಿದ್ದೇವೆ. ಒಂದಂಕಿ ಲಾಟರಿ, ಎರಡಂಕಿ ಲಾಟರಿ, ಬೇರೆ ಬೇರೆ ವಿಚಾರಗಳನ್ನು ನಾವು ನೋಡುತ್ತಿದ್ದೇವೆ. ಕ್ರಿಮಿನಲ್‌ಗಳು ಎಲ್ಲಿ ಸೇರುತ್ತಾರೆ ಅದನ್ನು ಇವತ್ತು ನಾವು ತಪ್ಪಿಸುವುದಕ್ಕೆ ಸಾಧ್ಯ ಇಲ್ಲದೆ ಇದ್ದರೆ, ಕ್ರಿಮಿನಲ್ಸ್‌ಗೆ ನಾವು ಇದ್ದೇವೆಂದು ಜೋರಾಗಿ ಹೇಳುವುದಕ್ಕೆ ಸಾಧ್ಯ ಇಲ್ಲದೆ ಇದ್ದರೆ, definitely they will have a field day. ರಾಜಾರೋಷವಾಗಿ ಅವರು ಓಡಾಡುವ ಪರಿಸ್ಥಿತಿ ಬರುತ್ತದೆ. ಎಷ್ಟು ಕಡೆ ಪೋಲಿಸ್ ಸ್ಟೇಷನ್‌ಗಳಲ್ಲಿ ನೋಟೆಡ್ ರೌಡಿಗಳನ್ನು ನಾವು ಲಿಸ್ಟ್ ಮಾಡಿ, ಅವರನ್ನು ಹಿಡಿದು ಭಯ ಹುಟ್ಟಿಸುತ್ತಿದ್ದೇವೆ? ಖಂಡಿತಾ ಇವತ್ತು ಆ ರೀತಿಯ ಭಯವನ್ನು ನೀವು ಹುಟ್ಟಿಸುತ್ತಿಲ್ಲ. ಪೋಲಿಸ್ ಸ್ಟೇಷನ್‌ಗಳಲ್ಲಿರುವ ಪೀಸ್ ಕಮಿಟಿಗಳನ್ನು ನೋಡಬೇಕು, ಆ ಪೀಸ್ ಕಮಿಟಿಯಲ್ಲಿ ಯಾರ್ಯಾರು ಇರಬಾರದು ಅಂಥವರುಗಳು ಪೀಸ್ ಕಮಿಟಿ ಸದಸ್ಯರುಗಳು! ಪೋಲಿಸ್‌ನವರಿಗೆ ಅವರು ಇದ್ದರೆ ಭಯ ಇರುವುದಿಲ್ಲ, ಗಲಾಟೆಯಾಗುವುದಿಲ್ಲವೆಂದು ಪೀಸ್ ಕಮಿಟಿಯಲ್ಲಿ ಸೇರಿಸಿಕೊಂಡಿದ್ದಾರೆ. They have got a Licence, ಒಟ್ಟಿನಲ್ಲಿ ಈ ರಾಜ್ಯ ಸರ್ಕಾರಕ್ಕೆ ಶೂನ್ಯವೇಳೆಯಲ್ಲಿ ಕೇಳುಕೊಳ್ಳುವುದೇನೆಂದರೆ, ಸ್ಯಾನ್‌ಫ್ರಾನ್ಸಿಸ್ಕೋಗೆ ಬೆಂಗಳೂರು ನಗರ ಈಕ್ವಲ್ ಆಗದೆ ಎನ್ನುವ ವಿಚಾರವನ್ನು ಮೊನ್ನೆ ಹೇಳಿದರು. It is above New York ಎಂದು ಪೇಪರ್‌ನಲ್ಲಿ ಓದಿದ್ದೇವೆ ಇದು ನಮಗೆಲ್ಲಾ ಸಂತೋಷದ ಸಂಗತಿ. ಇದರಲ್ಲಿ ನಾವು ಇನ್ನೂ ಕೂಡ ಸಾಧಿಸುವುದಿದೆ. ಆದರೆ ಅದರ ಜೊತೆ ಜೊತೆಗೆ directly proportionate to that, ಆ ಒಂದು ಹೆಗ್ಗಳಿಕೆ ಏನಿದೆ ಅದರ ಜೊತೆ ಜೊತೆಗೆ ಈ ರೀತಿ ಮರ್ಡರ್‌ಗಳು ನಡೆಯುತ್ತಿರುವು ಸಿಟಿ, ಅಪಹರಣಗಳು ನಡೆಯುತ್ತಿರುವ ಸಿಟಿ, ಸುಲಿಗೆಗಳಾಗುತ್ತಿರುವು ಸಿಟಿ ಆಗುತ್ತಾ ಹೋದರೆ ಯಾವುದೇ ದೃಷ್ಟಿಯಿಂದ ಇನ್‌ವೆಸ್ಟರ್ಸ್ ಮಾತು ಬಿಟ್ಟ ಬಿಡಿ, ಇಲ್ಲಿನ ಸಾಮಾನ್ಯ ಜನರು ಬದುಕುವುದಕ್ಕೇ ಇವತ್ತು ಧೈರ್ಯ ಬರುವುದಿಲ್ಲ. ತಮ್ಮ ಮಕ್ಕಳನ್ನು ಧೈರ್ಯವಾಗಿ ಶಾಲೆಗೆ ಕಳುಹಿಸುವುದಕ್ಕೆ ಬರುವುದಿಲ್ಲ. ಅವರು ಶಾಲೆಯಿಂದ ಬರುವ ತನಕ ತಮ್ಮ ಹೃದಯವನ್ನು ಎಡಗೈಯಲ್ಲಿ ತಂದೆ ತಾಯಿಗಳು ಹಿಡಿದುಕೊಂಡು ನಿಂತಿರಬೇಕು. ಪೋಲಿಸರ ಕೈಯಲ್ಲಿ ಇದನ್ನು ಮಾಡುವುದಷ್ಟಾಗದೆ ಇದ್ದರೂ ಕೂಡ they can show their presence. ನಾವು ಇದ್ದೇವೆ ಎನ್ನುವ ವಿಚಾರ ಜನರಿಗೆ ಕೂಡ ಗೊತ್ತಾಗಬೇಕು, ಆ ಕ್ರಿಮಿನಲ್ಸ್‌ಗಳಿಗೂ ಕೂಡ ಗೊತ್ತಾಗಬೇಕು. ಮಾತಿಗೆ ಮುಂಚೆ ನಮ್ಮಲ್ಲಿ ಸ್ಪಾಷ್ ಇಲ್ಲ, ಅದು, ಇದು ಎಂದು ಕತೆ ಹೇಳುತ್ತಾರೆ. ನಾನು ಒಂದು

ಬಹಳ ಗಂಭೀರವಾದ ಆಲೋಚನೆಯನ್ನು ಮಾಡುವುದಕ್ಕೆ ಇಷ್ಟಪಡುತ್ತೇನೆ. ಪೋಲಿಸ್ ಇಲಾಖೆಯಲ್ಲಿರುವ ಪರಸ್ಪರ ವೈರತ್ವ ಏನಿದೆ, ಹಿರಿಯ ಅಧಿಕಾರಿಗಳಲ್ಲಿ ಯಾರಿಗೆ ಕಂಡರೆ ಯಾರಿಗೆ ಆಗುವುದಿಲ್ಲ. That is the root cause for tis problem in Bangalore City. I am saying this with all responsibility at my command. ಬೇಕೆಂತಲೇ ಪೋಲೀಸ್ ಅಧಿಕಾರಿಗಳು ಕೆಲವು ದಂಧೆಗಳನ್ನು ಬೆಂಗಳೂರಿನಲ್ಲಿ ನಡೆಯುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದಾರೆ. ನನ್ನ ಸಂಪೂರ್ಣ ಜವಾಬ್ದಾರಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇದನ್ನು ನಾವು ತಡೆಯದೆ ಇದ್ದರೆ, ನೀವಿರಬಹುದು, ನಾವಿರಬಹುದು, ಬೆಂಗಳೂರಿನಲ್ಲಿ ಇನ್ನೂ ಮರ್ಡರ್‌ಗಳು ಆಗುತ್ತವೆ, ಇನ್ನು ಕಿಡ್ನಾಪ್ ಕೇಸ್‌ಗಳು ಆಗುತ್ತವೆ, ಇನ್ನು ಕೂಡ ಹಲ್ಲೆಗಳಾಗುತ್ತವೆ. ಇವತ್ತು ಕನ್‌ವಿಕ್ಷನ್ ರೇಟ್ ಏನಾದರೂ ನೋಡಿದರೆ, ಈ ಮಾತನ್ನು ಮುಖ್ಯಮಂತ್ರಿಗಳಿಗೆ ಟೀಕೆ ಮಾಡಬೇಕೆಂದು ಹೇಳುತ್ತಿಲ್ಲ, The conviction rate if very disappointing. ಐದಿ ಪರ್ಸೆಂಟ್ ನಾವು ಕನ್‌ವಿಕ್ಷನ್ ರೇಟ್ ಇಟ್ಟುಕೊಂಡು ಯಾವ ರೀತಿ ನಾವು ಇವರಿಗೆ ಹೇದರಿಸುತ್ತೇವೆ. ಇನ್‌ವೆಸ್ಟಿಗೇಷನ್ ನಡೆಯುತ್ತಿರುವುದು ನೋಡಿದರೆ ಭಯವಾಗುತ್ತದೆ. Investigation is at a anail pace. ಇನ್ವೆಸ್ಟಿಗೇಷನ್ ನಡೆಯುತ್ತಲೇ ಇಲ್ಲವೆಂದು ನಾವು ಹೇಳಬಹುದು. ಈ ದೃಷ್ಟಿಯಿಂದ ನಾವು ಕಳೆದ ಒಂದು ವಾರದಿಂದ, ಕಳೆದ ಹತ್ತು ದಿವಸಗಳಿಂದ all in a day, six murders, three robberies and one abduction. ಇದು ಯಾವುದಾದರೂ ನಮಗೆ ಕೀರ್ತಿ ತರುತ್ತದೆಯಾ? ನಾವು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಮುಂದೆ ತಾನೇ ಯೋಚನೆ ಮಾಡಿ ನಮ್ಮ ಬೆಂಗಳೂರು ನಗರಕ್ಕೆ ನಮ್ಮ ರಾಜಧಾನಿಗೆ ಇದು ಶೋಭೆ ತರುವುದಿಲ್ಲ, ನಾವು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ತಮಗೆ ಅನ್ನಿಸಬೇಕಾಗಿತ್ತು. ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುವುದೇನೆಂದರೆ, ಯಾವ ಜವಾಬ್ದಾರಿಯಲ್ಲಿ ನೀವು ಸೋತಿದ್ದೀರಿ, ಇದನ್ನು ಒಪ್ಪಿಕೊಂಡು ಇನ್ನು ಮುಂದೆ ಆದರೂ ಕೂಡ ನಗರದ ಸಾಮಾನ್ಯ ಜನತೆಗೆ, ಮತ್ತು ನಗರದಲ್ಲಿ ಯಾರು ಬಂದು ಇಲ್ಲಿ ಉದ್ಯಮ ಅಭಿವೃದ್ಧಿಗೊಳಿಸಬೇಕೆಂದು ಇದ್ದಾರೆ ಅವರಿಗೆ ರಕ್ಷಣೆ ಕೊಡುವ ಮತ್ತು ನೆಮ್ಮದಿ ಜೀವನ ಕೊಡುವ ಮತ್ತು ವಿಶ್ವಾಸ ಕೊಡುವ ಪೋಲಿಸ್ ಇಲಾಖೆಯ ಪುನರುಜ್ಜೀವನ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :— ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಮಹತ್ವದ ವಿಚಾರವನ್ನು ಪ್ರಸ್ತಾಪ ಮಾಡಿ ನಾನು ಸರ್ಕಾರಕ್ಕೆ ಅನೇಕ ಸಲಹೆಗಳನ್ನು ಕೊಡಬೇಕೆಂದಿದ್ದರೂ ಸಮಯದ ಅಭಾವದಿಂದಾಗಿ ನಾನು ಅದನ್ನು ಹೇಳುತ್ತಿಲ್ಲ. ಮಾನ್ಯ ಸುರೇಶ್ ಕುಮಾರ್‌ರವರು ಬೆಂಗಳೂರು ನಗರದಲ್ಲಿ ಹತ್ಯಗಳು, ದರೋಡೆಗಳು, ತಲ್ಲಣಗೊಳಿಸುವ ರೀತಿಯಲ್ಲಿ ಹೆಚ್ಚಾಗುತ್ತಿವೆ, ಇದರ ಬಗ್ಗೆ ಅತಂಕ ವ್ಯಕ್ತ ಮಾಡಿದ್ದಾರೆ. ನನಗೆ ಒಂದು ವಿಷಯ ಅಥವಾಗುತ್ತಿಲ್ಲ, ತಮಗೆ ಗೊತ್ತಿರುವ ಹಾಗೆ ಶೇಷಾದ್ರಿಪುರಂನಲ್ಲಿ

ರಾಜು ಎನ್ನುವ ಉದ್ಯಮಿಗೆ ಎರಡು ಮೂರು ತಿಂಗಳ ಹಿಂದೆ ಹಾಡು ಹಗಲಿನಲ್ಲಿ ಕೊಂದು ಹಾಕಿದರು. ಇದುವರೆಗೂ ಯಾರು ಕೊಂದರು, ಎನ್ನುವ ವಿಚಾರ ಯಾರಿಗೂ ಗೊತ್ತಾಗಲಿಲ್ಲ. ಅದಾದ ನಂತರ ಒಬ್ಬ ಚಾರ್ಟರ್ಡ್ ಅಕೌಂಟೆಂಟ್ ಓದುತ್ತಿದ್ದ ವಿದ್ಯಾರ್ಥಿಯನ್ನು ಶೇಷಾದ್ರಿಪುರಂನಲ್ಲಿ ಹಾಡು ಹಗಲಿನಲ್ಲೇ ಕೊಂದು ಹಾಕಿದರು. ಅದೂ ಕೂಡ ಇದುವರೆಗೂ ಪತ್ತೆಯಾಗಿರತಕ್ಕಂಥ ಸುಳಿವು ಏನು ಎಂದು ಗೊತ್ತಾಗಲಿಲ್ಲ. ನಿನ್ನೆ ದಿವಸ ಒಬ್ಬ ಜ್ಯೂವೆಲರ್ ಮರ್ಡರ್ ಮಾಡಿರುವುದು ನೋಡಿದರೆ ಬಹಳ ಕೆಟ್ಟ ಹಂತಕ್ಕೆ ನಾವು ಈ ವಿಚಾರದಲ್ಲಿ ತಲುಪಿದ್ದೇವೆ. ಪ್ರತಿ ನಿತ್ಯ ಬೆಂಗಳೂರಿನಲ್ಲಿ ಈ ರೀತಿಯ ಕೊಲೆಗಳು, ಬ್ಯಾಂಕ್ ನಿಂದ ಹಣ ತೆಗೆಯತಕ್ಕಂಥ ಸನ್ನಿವೇಶಗಳು, ಅಥವಾ ಆಭರಣ ಇಟ್ಟಿರತಕ್ಕಂಥ ಅಂಗಡಿಗಳು ಇಂತಹ ಕಡೆಗಳಲ್ಲೆಲ್ಲಾ ಇವೆಲ್ಲ ಪ್ರಕರಣಗಳು ಹೆಚ್ಚಾಗಿ ಪ್ರತಿ ನಿತ್ಯ ನಡೆಯುತ್ತವೆ. ಇದು ಒಂದು ಕಡೆ ಆದರೆ ಇನ್ನೊಂದು ಕಡೆ ಒಂಟಿ ಮನೆಯಲ್ಲಿ ಇರತಕ್ಕಂತಹ ಹೆಣ್ಣು ಮಕ್ಕಳು ನಾವು ಬದುಕುತ್ತೇವೆಯೋ ಇಲ್ಲವೋ ಎನ್ನುವ ಭಯದಿಂದ ಇರುವಂತಹ ವಾತಾವರಣ ಇವತ್ತು ಬೆಂಗಳೂರಿನಲ್ಲಿ ಸೃಷ್ಟಿಯಾಗಿದೆ. ನಮ್ಮ ಮುಖ್ಯಮಂತ್ರಿಗಳು ಮುಖ್ಯಮಂತ್ರಿಗಳಾದ ಹೊಸದರಲ್ಲಿ ಬೆಂಗಳೂರು ನಗರ ದರೋಡೆ, ಕೊಲೆ, ಸುಲಿಗೆ ಇಂತಹ ವಿಚಾರಗಳಲ್ಲಿ ಬಿಹಾರ ಪಾಟ್ನಾ ಮಟ್ಟಕ್ಕೆ ಹೊರಟುಹೋಗಿದೆ, ಇದನ್ನು ನಾವು ಸುಧಾರಣೆ ಮಾಡುವುದಕ್ಕೆ ಎಲ್ಲಾ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದರು. ಆದರೆ ಇದುವರೆಗೂ ಸಹ ಆ ರೀತಿಯಲ್ಲಿ ಲಾ ಅಂಡ್ ಆರ್ಡರ್ ಕಂಟ್ರೋಲ್ ಮಾಡುವ ವಿಚಾರದಲ್ಲಿ ಸ್ಟ್ರಾಂಗ್ ಆ್ಯಕ್ಷನ್ ತಾವು ತೆಗೆದುಕೊಂಡಿಲ್ಲ. ಕಳೆದ ಸಾರಿ ಮಾನ್ಯ ಗೃಹ ಮಂತ್ರಿಗಳಿಗೆ ನಾನು ಒಂದು ಸಲಹೆ ಕೊಟ್ಟಿದ್ದೆ. ವಿಷ್ಯುಯಲ್ ಮೀಡಿಯ ಏನಿದೆ ಅದರಲ್ಲಿ ಇಂತಹ ಭಯಂಕರ ದೃಶ್ಯಗಳು ತೋರಿಸುತ್ತಾರೆ. ನಿರುದ್ಯೋಗಿ ಯುವಕರಿಗೆ, ಮೋಸ ಮಾಡಬೇಕೆನ್ನುವ ಜನರಿಗೆ, ಯಾವ ರೀತಿ ತಪ್ಪಿಸಿಕೊಂಡು ಹೋಗಬಹುದು ಎನ್ನುವ ಬಗ್ಗೆ ಸುಲಭವಾಗಿ ಅದು ಎಲ್ಲರಿಗೂ ಕಾಣಿಸುವುದು ಅಂತವರಿಗೆ ಶಿಕ್ಷೆಕೊಡಬೇಕೆಂದು ತಮ್ಮ ಗಮನಕ್ಕೆ ತಂದಿದ್ದೆ. ದಂಡು ಪಾಳ್ಯದ ದರೋಡೆಗಳು ಇವರು ಎಷ್ಟು ಜನರಿಗೆ ಕೊಂದಿದ್ದಾರೆ, ಎನ್ನುವುದುರ ಬಗ್ಗೆ ಸ್ಪೆಷಲ್ ಫೋರ್ಸ್ ನೀವು ಇಮ್ಮಿಡಿಯಟ್ಟಾಗಿ ಮಾಡಿ ಎಂದು ನಾನು ಹೇಳಿದ್ದೆ. ಈಗಾಗಲೇ 100 ದಿನಗಳಾದವು ಅದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ತಾವು ಇದುವರೆಗೂ ಆ ವಿಚಾರದಲ್ಲಿ ಏನೂ ಮಾಡಿಲ್ಲ. ಮಾನ್ಯ ಅಧ್ಯಕ್ಷರೆ, ಒಬ್ಬ ಜಿಲ್ಲಾ ಮಟ್ಟದ ಉನ್ನತ ಅಧಿಕಾರಿಯ ಮೇಲೆ ಒಬ್ಬ ಜವಾಬ್ದಾರಿ ಮುಖಂಡರು ತಮಗೆ ಒಂದು ಪತ್ರವನ್ನು ಬರೆದಿದ್ದಾರೆ. ನಾನು ಅದರ ಬಗ್ಗೆ ವಿವರಗಳನ್ನು ಕೊಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಸುರೇಶ್ ಕುಮಾರ್‌ರವರು ಗೃಹ ಮಂತ್ರಿಗಳಾಗಲಿ ಅಥವಾ ಯಾವುದೇ ಇಲಾಖೆಯ ಮಂತ್ರಿಗಳಾಗಿ ಕಾರ್ಯ ನಿರ್ವಹಿಸಿಲ್ಲಯ ಅದರೆ ದುರದೃಷ್ಟವಶಾತ್ ಇಂದು ಮೇಲಟ್ಟದ ಅಧಿಕಾರಿಗಳಲ್ಲಿ ಗುಂಪುಗಾರಿಕೆ ನಡೆಯುವ ಬೆಳವಣಿಗೆ ನಡೆಯುತ್ತಿರುವುದು ನಿಜವಾಗಿದೆ. ಇದಕ್ಕೆ ಸರ್ಕಾರದವರು ಪರೋಕ್ಷವಾಗಿ ಪ್ರೋತ್ಸಾಹ ಕೊಡುತ್ತಿದೆ. ಹೇಗೆ ಎನ್ನುವ ಬಗ್ಗೆ ನಾನು ಈಗ ಹೇಳಬಯಸುತ್ತೇನೆ. ತಾವು ಇದರ ಬಗ್ಗೆ ದಯವಿಟ್ಟು ಬೇರೆ

33-A

ಅರ್ಥ ಕೊಡಬಾರದು. ಇಲಾಖೆಯ ಹಿತಾಸಕ್ತಿಯ ದೃಷ್ಟಿಯಿಂದ ನಾನು ವಿಚಾರವನ್ನು ಹೇಳಬೇಕಾಗಿದೆ. ಒಬ್ಬ ಡಿ.ಜಿ.ಪಿಯನ್ನು ನೇಮಕ ಮಾಡಿ ವಿಚಾರಣೆ ಮಾಡಿಕೊಂಡು ಬನ್ನಿ ಎಂದು ಹೇಳಿದರೆ ಆ ಡಿ.ಜಿ.ಪಿ ಮಟ್ಟದ ಅಧಿಕಾರಿಗೆ ಎಷ್ಟರ ಮಟ್ಟಿಗೆ ಆಸಕ್ತಿ ಇರುತ್ತದೆ ಹೇಳಿ. ಇದೊಂದೇ ಅಲ್ಲ, ಸರ್ಕಾರದ ಬಗ್ಗೆ ಬಹಳ ತೀಕ್ಷ್ಣತೆಯಿಂದ ಗಮನಿಸಬೇಕು. ಪೋಲಿಸ್ ಇಲಾಖೆ ಬಹಳ ಸೂಕ್ಷ್ಮವಾಗಿರತಕ್ಕಂಥ ಇಲಾಖೆಯಾಗಿದೆ. ಪೋಲಿಸರಿಗೋಸ್ಕರ ಮನೆಗಳನ್ನು ಕಟ್ಟುವ ಕಾರ್ಯದ ಉದ್ಘಾಟನಾ ಕಾರ್ಯಕ್ರಮಕ್ಕೆ ನಮ್ಮನ್ನು ಆಹ್ವಾನಿಸಿದ್ದರು. ಆ ಕಾರ್ಯಕ್ರಮಕ್ಕೆ ನಾವೆಲ್ಲರೂ ಹೋಗಿ ಕರ್ನಾಟಕದ ಪೋಲಿಸರು ಬಹಳ ಒಳ್ಳೆಯವರಾಗಿದ್ದಾರೆ ಮತ್ತು ಅಧಿಕಾರಿಗಳೂ ಕೂಡ ಒಳ್ಳೆಯವರಿದ್ದು ಅವರಿಗೆ ಸ್ವಾತಂತ್ರ್ಯವನ್ನು ಕೊಡಬೇಕಾಗಿದ್ದು ಅವಶ್ಯಕತೆ ಇದೆ ಎಂದು ಭಾಷಣವನ್ನು ನಾವೆಲ್ಲರೂ ಮಾಡಿದ್ದೇವೆ. ವಸ್ತುಸ್ಥಿತಿ ಏನಾಗುತ್ತಿದೆ ಎಂಬ ಬಗ್ಗೆ ತಾವು ದಯವಿಟ್ಟು ಯೋಚನೆ ಮಾಡಿ. ನಾನು ಮೊದಲೇ ಮಾತನಾಡುತ್ತಾ ಪತ್ರದ ಬಗ್ಗೆ ಹೇಳುತ್ತಿದ್ದೆ. ನಿರ್ದಿಷ್ಟವಾಗಿ ಒಬ್ಬ ಜಿಲ್ಲಾ ಮಟ್ಟದ ಅಧಿಕಾರಿಗಳು ಬ್ಯಾಂಕ್‌ನಿಂದ ಸುಮಾರು 13 ರಿಂದ 14 ಲಕ್ಷ ರೂ.ಗಳನ್ನು ಒಬ್ಬರು ಡ್ರಾ ಮಾಡಿಕೊಂಡು ತೆಗೆದುಕೊಂಡು ಹೋಗಿರುತ್ತಾರೆ, ಅದನ್ನು ಒಬ್ಬ ಕೆಳಮಟ್ಟದ ಅಧಿಕಾರಿ ಸೀಜ್ ಮಾಡುತ್ತಾನೆ, ಕೋರ್ಟಿಗೆ ಕಟ್ಟುವಾಗ ಅದರಲ್ಲಿ ಮೂರು ಲಕ್ಷ ರೂ.ಗಳೂ ಕಡಿಮೆ ಇರುತ್ತದೆ. ನಿಮ್ಮ ಗಮನಕ್ಕೆ ಬಂದ ತಕ್ಷಣ ಒಂದು ಹದಿನೈದು ಇಪ್ಪತ್ತು ದಿವಸಗಳಾದ ಮೇಲೆ ಆ ದುಡ್ಡನ್ನು ಅವರಿಗೆ ವಾಪಸ್ಸು ತೆಗೆದುಕೊಂಡು ಹೋಗಿ ಕೊಡುತ್ತಾರೆ. ಇದು ಜಿಲ್ಲಾ ಮಟ್ಟದ ವರಿಷ್ಠ ಅಧಿಕಾರಿಗಳು ಮಾಡುತ್ತಿರತಕ್ಕಂಥ ಕೆಲಸವಾಗಿದೆ. ತಮ್ಮ ಗಮನಕ್ಕೆ ಈ ವಿಚಾರ ಬಂದಿದೆ. ಇದರ ಬಗ್ಗೆ ಒಬ್ಬ ಮುಖಂಡರೂ ಕೂಡ ತಮಗೆ ಪತ್ರವನ್ನು ಬರೆದಿದ್ದಾರೆ. ಇಂದು ಮೇಲಟ್ಟದ ಅಧಿಕಾರಿಗಳಲ್ಲಿ ಯಾವುದೇ ಒಂದು ರೀತಿಯ ಹೊಂದಾಣಿಕೆ ಇಲ್ಲ. ಸರ್ಕಾರ ಅಡಳಿತಕ್ಕೆ ಬಂದ ತಕ್ಷಣ್ ತಾವು ಏನು ಹೇಳಿದ್ದೀರೆಂದರೆ ನಾವು ಶೇಕ್-ಅಪ್ ಮಾಡುತ್ತೇವೆ, ಏಕೆಂದರೆ ಇಲಾಖೆಯಲ್ಲಿ ಬಹಳ ಜನರು ಒಂದೇ ಕಡೆ ಬೇರು ಬಿಟ್ಟಿದ್ದಾರೆ ಎಂದು ಹೇಳಿದ್ದೀರಿ. ಭ್ರಷ್ಟಾಚಾರದ ವಿರುದ್ಧ ನಾನು ಧರ್ಮಯುದ್ಧವನ್ನೇ ಮಾಡುತ್ತೇನೆ ಎನ್ನುವ ಮಾತನ್ನು ತಾವು ಹೇಳಿದ್ದೀರಿ. ಆದರೆ ಆಕ್ಷನ್‌ನಲ್ಲಿ ತಾವು ಏನನ್ನು ತೋರಿಸಿದ್ದೀರಿ ಎಂಬ ಬಗ್ಗೆ ತಾವು ದಯವಿಟ್ಟು ಹೇಳಬೇಕು. ಇಂದು ಬೆಂಗಳೂರಿಗೆ ಬಹಳಷ್ಟು ಜನ ಇನ್‌ವೆಸ್ಟರ್ಸ್ ಬರುತ್ತಿದ್ದಾರೆ. ಮಾನ್ಯ ನಾರಾಯಣಮೂರ್ತಿಯವರಿಗೆ ಹಾಗೂ ಪ್ರೇಮ್‌ಜೀಯವರಿಗೆ ಸರ್ಕಾರ ಪೋಲಿಸ್ ರಕ್ಷಣೆಯನ್ನು ಕೊಟ್ಟಿದೆ. ಅದನ್ನು ಬಿಟ್ಟು ಸಾಮಾನ್ಯ ಜನರಿಗೆ ಪ್ರೊಟೆಕ್ಷನ್ ಕೊಡುವ ದೃಷ್ಟಿಯಿಂದ ಆ ಜನಗಳಿಗೆ ವಿಶ್ವಾಸ ಬರುವ ಹಾಗೆ ಯಾವ ರೀತಿಯ ಕ್ರಮಗಳನ್ನು ಸರ್ಕಾರ ತೆಗೆದುಕೊಂಡಿದೆ? ಪೋಲಿಸ್ ಕಾನ್ಸ್‌ಟೇಬಲ್‌ಗಳ ರಿಕ್ರೂಟ್‌ಮೆಂಟ್‌ನಲ್ಲಿ 40 ರಿಂದ 50 ಸಾವಿರ ರೂ.ಗಳನ್ನು ತೆಗೆದುಕೊಂಡಿದ್ದಾರೆ ಎನ್ನುವ ವಿಚಾರದಲ್ಲಿ ತಾವೇ ಸಿ.ಓ.ಡಿ.ಗೆ ರೆಫರ್ ಮಾಡಿದಿರಿ. ಸಿ.ಓ.ಡಿ.ಯವರು ಅದನ್ನು ನಿಜ ಎಂದು ಹೇಳಿದ್ದಾರೆ. ಈ ರೀತಿಯಾಗಿ ಒಬ್ಬ ಮೇಲಟ್ಟದ ಅಧಿಕಾರಿಯ ಮೇಲೆ ಆಪಾದನೆ

ಇದ್ದಂಥ ಸಂದರ್ಭದಲ್ಲಿ ಕಮಿಶನರ್ ಆಗಲಿ, ಡಿ.ಜಿ.ಯವರಾಗಲಿ ಏನು ಮಾಡುವುದಕ್ಕಾಗುತ್ತದೆ? ಅವರ ಮೇಲೆ ನೀವು ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಇಲಾಖೆಯಲ್ಲಿ ಮುಖ್ಯಮಂತ್ರಿಗಳು ಯಾರದೇ ಒತ್ತಡಕ್ಕೆ, ಜಾತಿಯ ಒತ್ತಡಕ್ಕೆ, ಗುಂಪಿನ ಒತ್ತಡವೇ ಇರಬಹುದು, ರಾಜಕೀಯ ಒತ್ತಡಗಳೇ ಇರಬಹುದು, ಒಟ್ಟಾರೆ ಯಾವುದೇ ಒತ್ತಡಕ್ಕೆ ಮುಖ್ಯಮಂತ್ರಿಗಳು ಮಣಿಯದೆ ಅಧಿಕಾರಿಗಳ ಮೇಲೆ ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ. ಒಂದು ಕಾಲದಲ್ಲಿ ಒಬ್ಬರು ಹಾನೆಸ್ಟ್ ಎಂದು ಹೇಳಿದರೆ ಅವರು ನಿಜವಾಗಿಯೂ ಹಾನೆಸ್ಟ್ ಆಗಿಯೇ ಇರುತ್ತಿದ್ದರು. ಆದರೆ ಇವೊತ್ತು ಆ ರೀತಿಯ ಪರಿಸ್ಥಿತಿ ಅಧಿಕಾರಿಗಳ ಮಟ್ಟದಲ್ಲೂ ಕೂಡ ಇಲ್ಲವಾಗಿದೆ. ಅದರ ಬಗ್ಗೆ ಚರ್ಚೆ ಮಾಡತಕ್ಕಂಥ ಸನ್ನಿವೇಶ ಇಂದು ಒದಗಿಬಂದಿದೆ. ಪೋಲಿಸ್ ಇಲಾಖೆಯಲ್ಲಿ ಗುಂಪುಗಾರಿಕೆ ಮೇಲ್ಪಟ್ಟದಲ್ಲಿ ಹೆಚ್ಚಾಗುತ್ತಿದೆ. ಇದಕ್ಕೆ ಪರೋಕ್ಷವಾಗಿ ತಾವು ಪ್ರೋತ್ಸಾಹವನ್ನು ಕೊಡುತ್ತಿದ್ದೀರಿ. ಇದನ್ನು ತಾವು ನಿಲ್ಲಿಸಬೇಕು. ಇನ್ನು ಬೆಂಗಳೂರು ನಗರದ ಎಲ್ಲಾ ರೋಡ್‌ಗಳಲ್ಲಿ ಕಳೆದ 15 ದಿವಸಗಳಿಂದ ಹಳದಿ ಬಣ್ಣದ ಗೇಟ್‌ಗಳನ್ನು ಹಾಕಿದ್ದಾರೆ. ಇದು ಏತಕ್ಕಾಗಿ ಹಾಕಿದ್ದಾರೋ, ಪ್ರತಿಯೊಂದು ರೋಡ್‌ಗೆ ಮೂರುಕಡೆ ನಾಲ್ಕು ಕಡೆ ಚೆಕ್ಕಿಂಗ್ ಪಾಯಿಂಟ್ಸ್ ಇಟ್ಟಿದ್ದಾರೆ, ಡ್ರೈವರ್‌ಗಳು ಡ್ರೈವಿಂಗ್ ಲೈಸೆನ್ಸ್ ಇಲ್ಲದೆ, ಓಡಿಸುವವರನ್ನು ಹಿಡಿಯಲು ಹಾಕಿದ್ದಾರೋ, ಕಳ್ಳಕಾಕರನ್ನು ಗುಮಾನಿ ಇಟ್ಟುಕೊಂಡು ಹಿಡಿಯಲು ಹಾಕಿದ್ದಾರೋ ನನಗಂತೂ ಗೊತ್ತಿಲ್ಲ. ಈ ರೀತಿ ಎಲ್ಲಾ ಕಡೆ ಗೇಟ್‌ಗಳನ್ನು ಹಾಕಿದ್ದರೂ ಕೂಡ ಅದರಿಂದ ಏನೂ ಉಪಯೋಗ ಕಂಡು ಬರುವುದಿಲ್ಲ. ಸಾಮಾನ್ಯ ಜನರಿಗೆ ಸಂರಕ್ಷಣೆ ಕೊಡುವ ವಿಷಯದಲ್ಲಿ ಜನರಿಗೆ ವಿಶ್ವಾಸ ಬರುವ ಹಾಗೆ ಕಾರ್ಯವನ್ನು ಕೈಗೊಳ್ಳುವಲ್ಲಿ ಸರ್ಕಾರದ ಪೋಲಿಸ್ ಇಲಾಖೆ ವಿಫಲವಾಗಿದೆಯೆಂದು ಬಹಳ ನೋವಿನಿಂದ ನಾನು ಹೇಳುತ್ತಿದ್ದೇನೆ. ಇಂದು ಜನರು ಯಾವಾಗ ಏನಾಗುತ್ತದೋ ಎನ್ನುವ ಭಯದ ವಾತಾವರಣದಲ್ಲಿದ್ದಾರೆ. ಬಾಲಕರ, ಎಸ್.ಆರ್.ಐ.ಗಳ ಹತ್ಯೆಯಾಗಿದೆ. ಯಾರೋ ಒಬ್ಬ ಕಂಟ್ರಾಕ್ಟರ್ ಒಂದು ಲಕ್ಷ ರೂ.ಗಳನ್ನು ಹೋಟೆಲ್ ರೂಮಿನಲ್ಲಿ ಇಟ್ಟಿದ್ದು ನಾಪತ್ತೆಯಾಗಿದೆ ಎನ್ನುವ ವಿಚಾರ ಪತ್ರಿಕೆಯಲ್ಲಿ ಬಂದಿತ್ತು. ಗೃಹಮಂತ್ರಿಗಳಾದವರು ಇದರ ಬಗ್ಗೆ ತಕ್ಷಣ ಪೋಲಿಸ್‌ರವರನ್ನು ಕರೆಸಿ ವಿಚಾರಣೆ ಮಾಡಿಸಿದ್ದಾರೆಯೇ? ಯಾರು ಅಲ್ಲಿ ಸಂಬಂಧಪಟ್ಟ ಅಧಿಕಾರಿ? ಹೇಗೆ ಆ ಕೇಸ್‌ನ್ನು ಅವರು ಮುಚ್ಚುಹಾಕಿದರು ಎಂಬ ಬಗ್ಗೆ ವಿಚಾರಗಳನ್ನು ತಾವು ಹೊರಗೆಡವಬೇಕಾಗುತ್ತದೆ. ಆದುದರಿಂದ ಇಂದು government has to show the will You have to prove with iron hands. Government, it means business, it means lad and order. ಇಲ್ಲದೇ ಹೋದರೆ ನಿಮ್ಮನ್ನು ಹೊರಗಡೆ ಕಳುಹಿಸುತ್ತೇವೆ ಎನ್ನತಕ್ಕಂಥದ್ದನ್ನು ನೀವು ತೋರಿಸದೇ ಹೋದರೆ you cannot control the law and order. ತಾವೇನು ಬೆಂಗಳೂರನ್ನು ಒಂದು ಉತ್ತಮವಾದ ನಗರವನ್ನಾಗಿ ಮಾಡಬೇಕೆನ್ನುವ ಆಸೆಯನ್ನು ಇಟ್ಟುಕೊಂಡಿದ್ದೀರೋ ಅದು ಭಗ್ನವಾಗುತ್ತದೆ. ಆದಕಾರಣ ತುರ್ತಾಗಿ ಮಾನ್ಯ ಮುಖ್ಯಮಂತ್ರಿಗಳು ಇದರ ಕಡೆಗೆ ಗಮನವನ್ನು ಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಸುರೇಶ್ ಕುಮಾರ್‌ರವರು ಹಾಗೂ ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಮಾತನಾಡಿ ಬೆಂಗಳೂರಿನಲ್ಲಿ ನಡೆದಿರುವ ಕೆಲವು ಘಟನೆಗಳ ಬಗ್ಗೆ ಮಾತನಾಡುತ್ತಾ ಸುಲಿಗೆ, ಕೊಲೆ, ದರೋಡೆ ಇತ್ಯಾದಿಗಳು ಹೆಚ್ಚಾಗಿ ಜನರು ಭಯಭೀತರಾಗಿದ್ದಾರಲ್ಲದೇ ದೊಡ್ಡ ದೊಡ್ಡ ಉದ್ದಿಮೆದಾರರೂ ಕೂಡ ಬಂಡವಾಳ ಹೂಡುವುದಕ್ಕೆ ಹಿಂಜರಿಯುತ್ತಿರುವ ಪರಿಸ್ಥಿತಿ ಉದ್ಭವವಾಗಿದೆಯೆಂದು ಹೇಳಿದ್ದಾರೆ. ಇದು ನಿಜ, ಇತ್ತೀಚೆಗೆ ಒಂದೆರಡು ಜನರ ಕೊಲೆಯಾದ ಮೇಲೆ ಅದರ ಬಗ್ಗೆ ಪತ್ರಿಕೆಯಲ್ಲಿ ಬಂದು, ಇದರಿಂದಲೇ ಜನರಿಗೆ ಒಂದು ರೀತಿಯಿಂದಾಗಿ ಭಯವನ್ನು ಉಂಟು ಮಾಡುವ ಪರಿಸ್ಥಿತಿ ಉಂಟಾಗಿದೆ. ಆದರೆ ವಾಸ್ತವ ಸ್ಥಿತಿ ಏನಿದೆ ಎಂಬುದನ್ನು ತಾವು ನೋಡಬೇಕು, ಅದರ ಬಗ್ಗೆ ಹೇಳಲು ನನಗೆ ತಾವು ಅವಕಾಶ ಮಾಡಿಕೊಡಬೇಕು. ಕೆಲವು ಸೀರೀಸ್ ಆಫ್ ಮರ್ಡರ್ಸ್ ಆದಮೇಲೆ ಸರ್ಕಾರದಲ್ಲಿ ಕಾನೂನು ಸುವ್ಯವಸ್ಥೆ ಕುಸಿದುಬಿದ್ದುಹೋಗಿದೆ, ಪೋಲಿಸ್ ಇಲಾಖೆ ಯಾವ ಕೆಲಸವನ್ನೂ ಮಾಡುತ್ತಿಲ್ಲ, ಹತೋಟಿ ಇಟ್ಟುಕೊಂಡು ಕೆಲಸ ಮಾಡುತ್ತಿಲ್ಲ ಎನ್ನುವ ವಾತಾವರಣ ಸೃಷ್ಟಿಯಾಗುತ್ತದೆ. ಈ ರೀತಿ ಮಾಧ್ಯಮಗಳ ಮೂಲಕ ಆಗುತ್ತಿರಬಹುದು ಅಥವಾ ಚರ್ಚೆಯಿಂದ ಸೃಷ್ಟಿಯಾಗುತ್ತಿರಬಹುದು. ನಾನು ಈ ವಿಚಾರವನ್ನು ಎಲ್ಲಾ ಮಾಧ್ಯಮಗಳಿಗೆ ಸಂಬಂಧಪಟ್ಟಂತೆ ಹೇಳುತ್ತಿಲ್ಲ. ಕೆಲವೊಂದು ಮಾಧ್ಯಮಗಳಿಗೆ ಸಂಬಂಧಪಟ್ಟಂತೆ ಹೇಳುತ್ತಿದ್ದೇನೆ. ನಾನು ಮರ್ಡರ್ ಆಗಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಅಂಕಿ ಅಂಶಗಳನ್ನೂ ಕೂಡ ಸದನಕ್ಕೆ ಕೊಡುತ್ತೇನೆ. ಕಳೆದ ಒಂದು ವರ್ಷ ಒಂಭತ್ತು ತಿಂಗಳಲ್ಲಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹೇಗಿದೆ ಎಂದದು ಎಲ್ಲರಿಗೂ ಗೊತ್ತಿದೆ. 175 ತಾಲ್ಲೂಕುಗಳಲ್ಲಿಯೂ ಹೇಗಿದೆ ಎಂದು ಗೊತ್ತಿದೆ. ಸಿಟಿಯಲ್ಲಿ ಕೂಡ ಎಷ್ಟರಮಟ್ಟಿಗೆ ಹತೋಟಿಯಲ್ಲಿಡುವ ಪ್ರಯತ್ನಗಳು ಆಗಿವೆ ಎಂಬುದು ತಮಗೂ ಗೊತ್ತಿದೆ. ಇದನ್ನು ನಾನು ಶಹಭಾಸ್‌ಗಿರಿ ಪಡೆಯಬೇಕು ಎಂದು ಹೇಳುತ್ತಿಲ್ಲ. ನನಗೂ ಯಾರ ಶಹಭಾಸ್‌ಗಿರಿ ಕೂಡ ಬೇಕಾಗಿಲ್ಲ. ನಾವು ನಿಷ್ಪಕ್ಷಪಾತವಾಗಿ ಕೆಲಸವನ್ನು ನಿರ್ವಹಿಸುತ್ತಿದ್ದೇವೆ ಎನ್ನುವುದಕ್ಕೆ ನಾನು ಒಂದೆರಡು ಅಂಕಿಅಂಶಗಳನ್ನು ಕೊಟ್ಟು ತೃಪ್ತಿಪಡಿಸುತ್ತಿದ್ದೀರಿ ಅಥವಾ ನಾವು ತೃಪ್ತಿಪಡತಕ್ಕಂಥ ರೀತಿಯಲ್ಲಿ ಅಂಕಿಅಂಶವನ್ನು ಹೇಳುತ್ತಿದ್ದೇವೆ ಎನ್ನತಕ್ಕಂಥದ್ದೂ ಕೂಡ ಬೇಡ. ಈಗೇನೂ ಸುಮಾರ್‌ಚಂದ್ ಸುರಾನರವರ ಕೊಲೆ ಏನಾಗಿದೆ ಇದಕ್ಕೆ ಸಂಬಂಧಪಟ್ಟ ಹಾಗೆ ಪೋಲಿಸ್ ಇಲಾಖೆಯಲ್ಲಿ ಈಗಾಗಲೇ ಮೂರು ಟೀಮ್ ಮಾಡಿದ್ದಾರಲ್ಲದೆ ಕಲ್‌ಪ್ರಿಟ್ಸ್‌ನ್ನು ಹಿಡಿಯಲು ಸರ್ವ ಪ್ರಯತ್ನವನ್ನು ನಮ್ಮವರು ಮಾಡಿ ಅರೆಸ್ಟ್ ಮಾಡುತ್ತಾರೆ. ಈಗಾಗಲೇ ಯಾವುದೇ ಮರ್ಡರ್ ಕೇಸ್ ಇರಬಹುದು, ಯಾವುದೇ ಒಂದು ಕಳ್ಳತನದ ಕೇಸ್ ಇರಬಹುದು ಅಥವಾ ಯಾವುದೇ ಒಂದು ದೊಡ್ಡ ಕ್ರೈಮ್ ಇರಬಹುದು ಸಿಟಿಯಲ್ಲಿ ಅಥವಾ ಸಿಟಿಯ ಹೊರಗಡೆ ಆದರೆ ತಕ್ಷಣ ಪೋಲಿಸ್‌ನವರು ಅದರ ಬಗ್ಗೆ ಇನ್‌ವೆಸ್ಟಗೇಟ್ ಮಾಡಿ ಬಯಲಿಗೆಳೆಯುವ ಕೆಲಸವನ್ನು ಮಾಡಿದ್ದಾರೆ. ಈ ರೀತಿಯಲ್ಲಿ ಒಂದಲ್ಲ ಹತ್ತಾರು

ಉದಾಹರಣೆಗಳನ್ನು ನಾನು ಕೊಡಬಹುದು. ಆದರೆ ಮಾನ್ಯ ಸದಸ್ಯರುಗಳು ಎರಡು ಕೇಸ್‌ಗಳ ಬಗ್ಗೆ ಏನು ಹೇಳಿದ್ದಾರೆ ಅದರ ಬಗ್ಗೆ ಇನ್ನೂ ಕ್ಲೂ ಸಿಕ್ಕಿಲ್ಲ. ಅದರ ಬಗ್ಗೆ ಕಂಡುಹಿಡಿಯಲು ಈಗಾಗಲೇ ನಮ್ಮವರು ಬಾಂಬೆಗೆ ಹೋಗಿದ್ದಾರೆ ಮತ್ತು ಬೇರೆ ಬೇರೆ ಕಡೆಗೆ ಹೋಗುತ್ತಿದ್ದಾರೆ. ಈ ಕ್ರೈಮ್‌ಗಳಲ್ಲಿ ಯಾರು ಇನ್‌ವಾಲ್ವ್ ಆಗಿರುತ್ತಾರೋ ಅಂಥ ಅಕ್ಯೂಸ್ಡ್‌ಗಳನ್ನು ಹಿಡಿದೇ ಹಿಡಿಯುತ್ತಾರೆ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಮತ್ತು ಈ ಹಿಂದೆ ಎರಡು ವರ್ಷ, ಮೂರು ವರ್ಷ ನಾಲ್ಕು ವರ್ಷಗಳಾದರೂ ಸಿಗದೇ ಇದ್ದಂಥ ಅಕ್ಯೂಸ್ಡ್ ಗಳನ್ನು ಇವೊತ್ತು ಹಿಡಿದು ಜೈಲಿನಲ್ಲಿಡಲಾಗಿದೆ.

4.50 ಪಿ.ಎಂ.

ತಾವು ಹೇಳಿದ ದಂಡುಪಾಳ್ಯ ಗ್ಯಾಂಗ್ ಈ ಏಳು, ಎಂಟು ವರ್ಷಗಳಿಂದ ಯಾರ ಕೈಗೂ ಸಿಕ್ಕಿರಲಿಲ್ಲ. ಈ ಗ್ಯಾಂಗ್‌ಗಳನ್ನು ಹಿಡಿದಿದ್ದಾರೆ. ಈ ವಿಷಯವನ್ನು ತಾವು ಸದನದಲ್ಲಿ ಪ್ರಸ್ತಾಪ ಮಾಡಿದ ಮೇಲೆ ನಾವು ಮತ್ತು ಮಾನ್ಯ ಮುಖ್ಯಮಂತ್ರಿಯವರು ನೇರವಾಗಿ ಮಾತನಾಡಿ, ಇದಕ್ಕೆ ಒಂದು ಸ್ಪೆಷಲ್ ಕೋರ್ಟ್ ಮಾಡಿ, ಜಡ್ಜ್‌ಗಳನ್ನು ನೇಮಕ ಮಾಡಿ ಎಂದು ಈಗಾಗಲೇ ಲಾ ಡಿಪಾರ್ಟ್‌ಮೆಂಟ್ ಮುಖಾಂತರ ಹೈಕೋರ್ಟ್ ರಿಜಿಸ್ಟ್ರಾರ್ ರವರಿಗೆ ನಮ್ಮ ಇಲಾಖೆಯಿಂದ ಪತ್ರವನ್ನು ಬರೆದಿದ್ದೇವೆ. ಅಲ್ಲಿ ನೀವು, ನಾವು ಹೇಳಿದ ಹಾಗೆ ನಡೆಯುತ್ತದೆಯೇ? ಹಾಗೆ ನಡೆಯುವುದಾದರೆ ಅದು ಹೇಗೆಂದು ತಾವು ಹೇಳಿ. ನೀವು ಅದನ್ನು ಹೇಳಿದರೆ ಆ ರೀತಿ ಮಾಡಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಮಾನ್ಯ ಅಧ್ಯಕ್ಷರೇ, ನಾನು ಜಡ್ಜ್‌ಗಳಿಗೆ ಇನ್‌ಫ್ಲ್ಯೂಯನ್ಸ್ ಮಾಡಬೇಕೆಂದು ಹೇಳುತ್ತಿಲ್ಲ. ನನಗೆ ಗೊತ್ತಿರುವ ಹಾಗೆ ಮಾನ್ಯ ಮುಖ್ಯಮಂತ್ರಿಯವರು ಮುಖ್ಯ ನ್ಯಾಯಾಧೀಶರನ್ನು ಆಗಾಗ್ಗೆ ಭೇಟಿ ಮಾಡುತ್ತಾ ಇರುತ್ತಾರೆ. ಇಂತಹ ವಿಷಯಗಳು ಪ್ರಸ್ತಾಪವಾಗುತ್ತಿರುತ್ತದೆ. ಈ ವಿಷಯ ಎಂತಹ ಹೀನಸ್ ಕ್ರೈಮ್ ಎನ್ನುವಂಥಾದ್ದು ನ್ಯಾಯಾಧೀಶರ ಗಮನಕ್ಕೂ ಬರುತ್ತದೆ. ಇದು ಸ್ಪೆಷಲ್ ಕೇಸ್ ಇದನ್ನು ಮಾಡಬೇಕಾಗುತ್ತದೆ. ಕೇಂದ್ರಸರ್ಕಾರದವರು ಫಾಸ್ಟ್ ಟ್ರಾಕ್ ಕೋರ್ಟ್ ಮಾಡುವುದಕ್ಕೆ ಹೇಳಿದ್ದಾರೆ ಅದೇ ರೀತಿ ಇದನ್ನು ಮಾಡಬೇಕಾಗುತ್ತದೆ. ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ದಂಡುಪಾಳ್ಯ ಉದಾಹರಣೆಯನ್ನು ಏಕೆ ಕೊಟ್ಟೆ ಎಂದರೆ ಇದಕ್ಕೆ ಕಾರಣ government should show that it means business. ಸ್ಟ್ರಾಂಗ್ ಆಗಿ ಆಕ್ಷನ್ ತೆಗೆದುಕೊಳ್ಳುತ್ತಾರೆನ್ನುವುದನ್ನು ತೋರಿಸದೇ ಹೋದರೆ ಇದು ಆಗುವುದಿಲ್ಲ. ಈಗ ಮತ್ತೆ ರೌಡಿಸಂ ಜಾಸ್ತಿಯಾಗುತ್ತಿದೆ. ನಾವು ಇದರ ಬಗ್ಗೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳದೇ ಹೋದರೆ, ಇದು ಬೆಳೆಯುತ್ತದೆ. ಇದನ್ನು ನಾವು ಪ್ರಸ್ತಾಪ ಮಾಡುವುದಕ್ಕಾಗದೇ ಇರುವಂತಹ ಸನ್ನಿವೇಶ ಬರಬಹುದೆಂಬುದನ್ನು ಹೇಳಿದರು. It is a fact. ಈ ವಿಚಾರವನ್ನು ನಾನು ಹೋಂ

ಡಿಪಾರ್ಟ್‌ಮೆಂಟ್ ಬಗ್ಗೆ ಮಾತನಾಡುವಾಗ ಹೇಳುತ್ತೇನೆ. ಈಗ ನಾನು ದಂಡುಪಾಳ್ಯ ಉದಾಹರಣೆಯನ್ನು ಏಕೆ ಕೊಟ್ಟೆ ಎಂದರೆ, government should show its will. ಇವರು ಪತ್ರವನ್ನು ಬರೆದಿದ್ದೇವೆ, ಅವರು ಪತ್ರವನ್ನು ಬರೆಯಲಿಲ್ಲವೆಂದರೆ ಹೇಗೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ನಾವು ಏನು ಪ್ರಯತ್ನಗಳನ್ನು ಮಾಡಬೇಕೋ, ಅದನ್ನು ನಮ್ಮ ಇತಿಮಿತಿಯಲ್ಲಿ ಮಾಡಿದ್ದೇವೆ. ಈಗ ಹೈಕೋರ್ಟ್ ರಿಜಿಸ್ಟ್ರಾರ್‌ರವರು ಏನು ತೀರ್ಮಾನವನ್ನು ತೆಗೆದುಕೊಳ್ಳುತ್ತಾರೊ ಅದರ ಪ್ರಕಾರ ನಾವು ಮಾಡುಬೇಕಾಗುತ್ತದೆ. ನಾವು ಈ ಒಂದೇ ವಿಷಯವನ್ನಲ್ಲ, ಹಿಂದೆ ಕಂಬಾಲಪಲ್ಲಿ ಬಗ್ಗೆ ಕೂಡ ಬರೆದಿದ್ದವು, ಅದೇ ರೀತಿಯಲ್ಲಿ ಬಾಂಬ್ ಬ್ಲಾಸ್ಟ್, ದಂಡುಪಾಳ್ಯ, ಇವುಗಳ ಬಗ್ಗೆಯೂ ಬರೆದಿದ್ದವು. ಹೀಗೆ ನಾನು ಹತ್ತಾರು ಉದಾಹರಣೆಗಳನ್ನು ಕೊಡಬಹುದು. ಇಲ್ಲಿ ನಾವು ಇದರ ಬಗ್ಗೆ ಏನು ಪ್ರಯತ್ನ ಮಾಡಿದ್ದೇವೆಂಬುದನ್ನು ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಒಂದು ಸಲವಲ್ಲ, ಅನೇಕ ಸಲ ಈ ವಿಷಯಗಳು ಸೂಕ್ಷ್ಮವಾಗಿರುವುದರಿಂದ ಇದನ್ನು ಎಲ್ಲಿ ಹೇಗೆ ಮಾತನಾಡಬೇಕೋ ಅದನ್ನು ಆ ರೀತಿಯಾಗಿ ಆಡಿದ್ದಾರೆ. ನಾವು ಅದಕ್ಕೆ ಪುನಃ ಒತ್ತುಕೊಟ್ಟು ಹೇಳುವಂತಹ ಅವಶ್ಯಕತೆ ಇಲ್ಲವೆಂದು ನಾನು ಭಾವಿಸಿದ್ದೇನೆ. ಇನ್ನು ಎರಡನೆಯದಾಗಿ ಪ್ರತಿ ದಿವಸ ಕೊಲೆ, ಡಕಾಯಿತಿ, ಕಳ್ಳತನ, ಸರಗಳ್ಳತನ, ಮನೆಗಳ್ಳತನ, ಮೋಟಾರು ವಾಹನಗಳ ಕಳವು ಇವುಗಳು ರಾಜ್ಯದಲ್ಲಿ ಆರು ತಿಂಗಳುಗಳಲ್ಲಿ 1998ರಿಂದ ಇಲ್ಲಿಯವರೆಗೆ ಎಷ್ಟು ನಡೆದಿದೆ ಎಂಬ ಬಗ್ಗೆ ಅಂಕಿಸಂಖ್ಯೆಗಳನ್ನು ಕೊಡುತ್ತೇನೆ. ಸಿಟಿಯಲ್ಲಿ 1998ರಲ್ಲಿ ಕೊಲೆ ಪ್ರಕರಣಗಳು ನಡೆದಿರುವಂಥಾದ್ದು 117, 1999ರಲ್ಲಿ 105, 2000ದಲ್ಲಿ 125, 2001ರ ಜೂನ್ ತಿಂಗಳವರೆಗೆ 105,. ಡಕಾಯಿತಿ 1998ರಲ್ಲಿ 31, 1999ರಲ್ಲಿ 27, 2001ರಲ್ಲಿ 27, ಕಳ್ಳತನ 1998ರಲ್ಲಿ 222, 1999ರಲ್ಲಿ 178, 2000ದಲ್ಲಿ 125, 2001ರ ಜೂನ್ ತಿಂಗಳವರೆಗೆ 86, ಸರಗಳ್ಳತನ 1998ರಲ್ಲಿ 101, 1999ರಲ್ಲಿ 89, 2000ದಲ್ಲಿ 68, 2001ರ ಜೂನ್ ತಿಂಗಳವರೆಗೆ 46, ಮನೆಗಳ್ಳತನ 1998ರಲ್ಲಿ 1520, 1999ರಲ್ಲಿ 1440, 2000ದಲ್ಲಿ 1221, 2001ರ ಜೂನ್ ತಿಂಗಳವರೆಗೆ 1046, ಈ ರೀತಿಯಾಗಿ ಮೋಟಾರು ವಾಹನಗಳ ಹಾಗೂ ಇತರೇ ಬೇರೆ ಬೇರೆ ಅಂಕಿಸಂಖ್ಯೆಗಳು ಇದೆ. ಈ ಅಂಕಿಅಂಶಗಳು ಏನು ತೋರಿಸುತ್ತದೆ ಎಂದರೆ ನಮ್ಮ ಸರ್ಕಾರ ಈ ಅಪರಾಧಗಳು ಏನು ಆಗುತ್ತಿವೆ, ಅವು ದರೋಡೆ ಇರಬಹುದು, ಕೊಲೆ ಇರಬಹುದು, ಸುಲಿಗೆ ಇರಬಹುದು. ಇದನ್ನು ಕಡಿಮೆ ಮಾಡುವಂಥ ರೀತಿಯಲ್ಲಿ ಸರ್ವ ಪ್ರಯತ್ನವನ್ನು ಮಾಡಿದೆಯೇ ಹೊರತು ಅದನ್ನು ಹೆಚ್ಚಿಸುವಂತಹದ್ದು ನಮ್ಮ ಕಾಲದಲ್ಲಿ ಆಗಿಲ್ಲವೆಂಬುದನ್ನು ಧೈರ್ಯವಾಗಿ ಹೇಳುತ್ತೇನೆ. ತಾವು ಬೇಕಾದರೆ ನಿಮ್ಮ ಚೇಂಬರ್‌ಗೆ ನನ್ನನ್ನು ಕರೆದರೆ ಈ ಎಲ್ಲಾ ಅಂಕಿಸಂಖ್ಯೆಗಳನ್ನು ತಮ್ಮ ಮುಂದಿಡುತ್ತೇನೆ. ಈ ಆಡ್‌ಮಿನಿಸ್ಟ್ರೇಟಿವ್ ರಿಪೋರ್ಟ್ ಅನ್ನು ನಾನು ಪ್ರಿಂಟ್ ಮಾಡುವುದಿಲ್ಲ. ಇದು ಹತ್ತಾರು ವರ್ಷಗಳಿಂದ ಪ್ರಿಂಟ್ ಮಾಡಿರುವಂಥಾದ್ದು, ಇದೆಲ್ಲವನ್ನೂ

ನಾವು ನೋಡಬೇಕಾಗುತ್ತದೆ. ನಮಗೆ ಜನರು ಇದರ ಬಗ್ಗೆ ಪತ್ರವನ್ನು ಬರೆಯುವಂಥಾದ್ದು, ಮಾತನಾಡುವಂಥಾದ್ದು ಇದೆ, ನಾವು ಜನರಿಗೆ ಇದರ ಬಗ್ಗೆ ಪತ್ರವನ್ನು ಬರೆಯುವಂಥಾದ್ದು, ಮಾತನಾಡುವುವಂಥಾದ್ದು ಇದೆ, ನಾವು ಅವರಿಗೆ ಇದನ್ನು ತಿಳಿಸಬೇಕಲ್ಲಾ, ನಾವು ಅನೇಕ ಸಾರಿ ಪ್ರಾಮಾಣಿಕವಾಗಿ ,ಪ್ರಯತ್ನಪಟ್ಟು ಒಳ್ಳೆಯ ಅಧಿಕಾರಿಗಳನ್ನು ಹಾಕಿ ಕೆಲಸ ಮಾಡಿದ್ದೇವೆ. ನಮಗೂ ಕೆಲವು ತೊಂದರೆಗಳಿವೆ, ಕಾನ್ಸ್ಟೇಬಲ್ ರಿಕ್ರೂಟ್‌ಮೆಂಟ್ ಬಗ್ಗೆ ಏನಾಯತೆಂಬುದು ತಮಗೂ ಗೊತ್ತಿದೆ, ಮತ್ತೆ ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳ ರಿಕ್ರೂಟ್‌ಮೆಂಟ್‌ಗೆ ಸ್ಟೇ ಇದೆ. ಈ ರೀತಿ ಒಂದಲ್ಲ, ಹತ್ತಾರು ಬೇರೆ ಬೇರೆಯಾದ ನ್ಯೂನ್ಯತೆಗಳು ಇದೆ. ಈ ರೀತಿಯಾಗಿ ನ್ಯೂನ್ಯತೆಗಳು ಇದ್ದರೂ ಕೂಡ ನಮ್ಮ ಇಲಾಖೆಯು ಈ ಕ್ರಿಮಿಗಳನ್ನು ಹಿಡಿತದಲ್ಲಿಟ್ಟುಕೊಂಡು ಕಂಟ್ರೈನ್ ಮಾಡಿ ಆದಷ್ಟು ಪ್ರಾಮಾಣಿಕವಾದಂತಹ ಪ್ರಯತ್ನ ಮಾಡಿದ್ದಾರೆ. ಅದರ ಅಂಕಿ ಸಂಖ್ಯೆಯನ್ನು ಕೊಟ್ಟಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಮಾನ್ಯ ಅಧ್ಯಕ್ಷರೇ, ಇವತ್ತು ಬೆಂಗಳೂರಿನ ನಾಗರಿಕರು ಸರ್ಕಾರದಿಂದ ಬಯಸುತ್ತಿರುವಂಥಾದ್ದು ರಕ್ಷಣೆಯ ಭರವಸೆಯನ್ನು, ಅವರು ಕೊಡುವಂತಹ ಅಂಕಿಅಂಶಗಳನ್ನು ಅವರು ಕೇಳುತ್ತಿಲ್ಲ. ಆದುದರಿಂದ ತಾವು ದಯಮಾಡಿ ಈ ವಿಚಾರದಲ್ಲಿ ಭರವಸೆಯ ಮಾತುಗಳನ್ನು ಹೇಳಿ. ನೀವು ಜನರಿಗೆ ನಾವಿದ್ದೇವೆ, ನಾವು ಮಾಡುತ್ತೇವೆ, ನಾವು ಇದನ್ನು ಮಾಡಿದ್ದೇವೆಂಬ ಮಾತುಗಳನ್ನು ಹೇಳುವುದು ಬಿಟ್ಟು, ನೀವು ಅಂಕಿಸಂಖ್ಯೆಗಳನ್ನು ಕೊಟ್ಟರೆ ಏನಾಗುತ್ತದೆ? ನನಗೆ ಇದೆಲ್ಲಾ ಗೊತ್ತಿದೆ,

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೇ, ನಾನು ಏಕೆ ಈ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದೇನೆಂದರೆ ಈ ರಾಜ್ಯದ ಜನರಿಗೆ ಮತ್ತು ನಗರದ ಸಾರ್ವಜನಿಕರಿಗೆ ಇದು ಗೊತ್ತಾಗಬೇಕು. ಕೆಲವು ಸಲ ಏನಾಗುತ್ತದೆಂದರೆ ಕೆಲವು ಮಾತುಗಳನ್ನು ಹೈಲೈಟ್ ಮಾಡುವುದರಿಂದ ಜನರಲ್ಲಿ ಒಂದು ರೀತಿಯ ಭೀತಿಯ ವಾತಾವರಣ ನಿರ್ಮಾಣವಾಗುತ್ತದೆ. ರಾಜ್ಯಕ್ಕೆ ಅನೇಕ ಇನ್‌ವೆಸ್ಟರ್‌ಗಳು ಬರುತ್ತಾರೆಂಬುದು ತಮಗೂ ಗೊತ್ತಿದೆ. ಈಗ ಸ್ಟಾರ್ ಲೈಫ್‌ನವರು ಮೂರ್ನಾಲ್ಕು ದಿವಸಗಳ ಹಿಂದೆ ಐದು ಕೋಟಿ ರೂಪಾಯಿಗಳ ಬಂಡವಾಳ ಹೂಡುವಂಥಾದಕ್ಕೆ ಮುಂದೆ ಬಂದಿದ್ದಾರೆ. ನಾವು ರಕ್ಷಣೆಯ ವಿಚಾರದಲ್ಲಿ, ಕರ್ತವ್ಯದಲ್ಲಿ ಹಿಂದೇಟು ಹಾಕಿದ್ದೇವೆಂದು ಯಾರೂ ತಿಳಿದುಕೊಳ್ಳುವುದು ಬೇಡ. ತಾವು ಹೇಳಿದಂತಹ ಕೇಸ್‌ಗಳು ಒಂದೆರಡು ಆಗಿದೆ, ಇಂತಹ ಕೇಸ್‌ಗಳನ್ನು ಪತ್ತೆ ಹಚ್ಚುವಂತಹ ಕೆಲಸದಲ್ಲಿ ಸರ್ವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಅಷ್ಟೇ ಅಲ್ಲ ಜ್ಯೂರಿಸ್‌ಡಿಕ್ಷನ್‌ನಲ್ಲಿ, ಎಸಿಪಿ ಇರಬಹುದು, ಇನ್‌ಸ್ಪೆಕ್ಟರ್‌ಗಳು ಇರಬಹುದು, ಡಿಸಿಪಿ ಇರಬಹುದು ಅವರವರ ಅಧಿಕಾರ ವ್ಯಾಪ್ತಿಯಲ್ಲಿ ಇಂತಹ ಘಟನೆಗಳು ಹೆಚ್ಚುವಂಥಾದ್ದು, ಅಥವಾ ಮರು ಘಟನೆ ನಡೆಯುವಂಥಾದ್ದು ಆದರೆ ಸರ್ಕಾರ ಸುಮ್ಮನೆ ಇರುವುದಿಲ್ಲ. ಅಂತಹ ಅಧಿಕಾರಿಗಳ ವಿರುದ್ಧವೂ ಆಕ್ಷನ್ ತೆಗೆದುಕೊಳ್ಳುತ್ತೇವೆ. ನಾವು ಸಾಮಾನ್ಯ ಜನರಿಗೆ ರಕ್ಷಣೆ ಕೊಡುವಂಥಾದ್ದು ನಮ್ಮ ಕರ್ತವ್ಯವಾಗಿದೆ.

ಅದನ್ನು ನಾನು ಒಪ್ಪುತ್ತೇನೆ, ಈ ಕರ್ತವ್ಯದಲ್ಲಿ ಎಂದಿಗೂ ಚ್ಯುತಿಗೊಳಿಸುವುದಿಲ್ಲ, ಹಿಂದೇಟು ಹಾಕುವುದಿಲ್ಲ, ಸರ್ವಪ್ರಯತ್ನವನ್ನು ಮಾಡುತ್ತೇವೆನ್ನುವಂತಹ ಭರವಸೆಯನ್ನು ನಾನು ಕೊಡುತ್ತೇನೆ. ಇನ್ನು ಮೂರನೆಯದಾಗಿ ಈಗಾಗಲೇ ಅನೇಕ ಕಡೆ "ಹೊಯ್ಸಳ" ವ್ಯಾನ್‌ಗಳು ಏನಿವೆ, ಇದಕ್ಕೆ ಸಿಬ್ಬಂದಿಗಳ ಕೊರತೆ ಇರುವ ಕಾರಣ ಕೆಲವು ಕಡೆ ತೊಂದರೆ ಇದೆ. ಅದಕ್ಕೆ ತಕ್ಷಣ ರೂಲ್ಸ್ ಅಮೆಂಡ್‌ಮೆಂಟ್ ಮಾಡಿದ್ದೇವೆ. ಇದರಲ್ಲಿ ಎರಡಾಗಿದೆ ಸಿಓಡಿಯವರು ಇದನ್ನು ಸಾರಸಗಟಾಗಿ ತಿರಸ್ಕಾರ ಮಾಡಿದ್ದಾರೆಂಬ ಮಾತನ್ನು ತಾವು ಹೇಳಿದ್ದೀರಿ. ಅವರೂ ಕೂಡ ಎರಡು ಮಾತನ್ನು ಹೇಳಿದ್ದಾರೆ. procedural lapse, ಇನ್ನೊಂದು Supreme Court ಎಂಪ್ಲಾಯಮೆಂಟ್ ಎಕ್ಸ್‌ಚೇಂಜ್‌ನಿಂದ ತಾವು ಹೆಸರುಗಳನ್ನು ತೆಗೆದುಕೊಂಡು ಈ ರೆಕ್ರೂಟ್‌ಮೆಂಟ್ ಮಾಡುವುದಕ್ಕಿಂತ ಸುಪ್ರೀಂ ಕೋರ್ಟ್ ಆಜ್ಞೆಯ ಪ್ರಕಾರ ಪತ್ರಿಕೆಗಳಲ್ಲಿ ಜಾಹೀರಾತು ಕೊಟ್ಟು ಅಭ್ಯರ್ಥಿಗಳನ್ನು ಕರೆದು ರೆಕ್ರೂಟ್ ಮಾಡಬೇಕೆಂದು ಹೇಳಿದ್ದಾರೆ. ಅದಕ್ಕೆ ನಾವು ಪತ್ರಿಕೆಗಳಲ್ಲಿ ಜಾಹೀರಾತು ಕೊಟ್ಟು ನೇಮಕಾತಿ ಮಾಡಬೇಕು. Corruption charges prove ಆಗಿಲ್ಲ ಎನ್ನುವುದನ್ನು ಅವರೇ ಹೇಳಿದ್ದಾರೆ. ಇದುವರೆಗೂ ಉದ್ಯೋಗ ವಿನಿಮಯ ಕಚೇರಿಯಿಂದ ಹೆಸರುಗಳನ್ನು ತೆಗೆದುಕೊಂಡು ಆಯಾ ಜಿಲ್ಲೆಯ ಜನರನ್ನು ತೆಗೆದುಕೊಳ್ಳುವಂಥಾದ್ದು ಆಗುತ್ತಿತ್ತು. ಅದುದರಿಂದ ರೂಲ್ಸ್ ಅಮೆಂಡ್ ಆಗುವವರೆಗೂ ನಾವು ಅದಕ್ಕೆ ಸ್ಟಿಕ್‌ಆನ್ ಆಗಬೇಕು. ಇದಾದ ಮೇಲೆ ಹೊಸದಾಗಿ ರೆಕ್ರೂಟ್‌ಮೆಂಟ್ ಮಾಡಬೇಕೆನ್ನುವಂಥಾದ್ದು ಇದೆ. ನಾವು ಈ ರೀತಿ ಮಾಡಬೇಕೆಂದರೆ ಪುನಃ ಮೂರು ತಿಂಗಳು ಆಗುತ್ತದೆ, ಪರಿಸ್ಥಿತಿ ಈ ರೀತಿ ಇರುವುದರಿಂದ ನಿಂತಿದೆಯೇ ಹೊರತು ನಮ್ಮಿಂದಾಗಲೀ, ಸರ್ಕಾರದಿಂದಾಗಲಿ, ಯಾವುದೇ ಅಡೆತಡೆಗಳು ಇಲ್ಲ. ಇನ್ನು ಸುಮಾರು 500 ಸಬ್ ಇನ್‌ಸ್ಪೆಕ್ಟರ್‌ಗಳ ಹುದ್ದೆ ಖಾಲಿ ಇದೆ, ಅದನ್ನು ಇನ್ ಸರ್ವಿಸ್‌ನವರಿಗೆ ತಾವು ಕೊಟ್ಟು ಪ್ರಾರಂಭ ಮಾಡಿರುವುದನ್ನು ನಾನು ರೂಲ್ಸ್ ಮಾಡಿ, no objection call for ಮಾಡಿ ಅದಕ್ಕೆ ಪಬ್ಲಿಕ್‌ನೋಟಿ ಕೊಟ್ಟು ನೋಟಿಫಿಕೇಷನ್ ಇಶ್ಯೂ ಮಾಡಿದ್ದೇವೆ. ಅದಕ್ಕೆ ಕೆಎಟಿಯಿಂದ ತಡೆಯಾಜ್ಞೆ ಬಂತು, ಇದು ಬಂದು ಆರು ತಿಂಗಳಾಯಿತು. ಈಗ ಇದು ಅವರ ಮುಂದಿದೆ, ಅಲ್ಲಿ ನಾವು ನೀವು ಹೇಳಿದ ಹಾಗೆ ಮಾತನಾಡುವುದಕ್ಕೆ ಆಗುವುದಿಲ್ಲ. ಅದು ರೊಟೀನ್ ಕೋರ್ಸ್‌ನಲ್ಲಿ ಬರಬೇಕು, ಅದಕ್ಕೂ ನಾವು ಪ್ರಯತ್ನ ಮಾಡುತ್ತಿದ್ದೇವೆ, ನಮ್ಮ ವಕೀಲರು ಅದಷ್ಟು ಒತ್ತಾಯ ಮಾಡಿ ಬೇಗ ತೀರ್ಪು ಕೊಡಿ ಎಂದು ಕೇಳುತ್ತಿದ್ದಾರೆ, ಹೀಗೆ ಕೆಲವು ತೊಂದರೆಗಳಿದ್ದಾವೆಯೆ ಹೊರತು ಉಳಿದಿದ್ದರಲ್ಲಿ ನಾವು ಹಿಂದೇಟು ಹಾಕಿಲ್ಲ, ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರ ಸರ್ವ ಪ್ರಯತ್ನ ಮಾಡುತ್ತಿದೆ. ಎರಡನೆಯದಾಗಿ ಆ ಭಾಗದಲ್ಲಿರುವ ಪೋಲಿಸ್ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡುತ್ತೇವೆ ಹಾಗೆ ಜವಾಬ್ದಾರಿ ಸರಿಯಾಗಿ ನಿರ್ವಹಿಸದಮರ ಮೇಲೆ ಕ್ರಮ ತೆಗೆದುಕೊಳ್ಳುವ ಕೆಲಸವನ್ನು ಮಾಡುತ್ತೇವೆನ್ನುವ ಮಾತನ್ನು ಹೇಳಬಯಸುತ್ತೇನೆ. ಮೂರನೆಯದಾಗಿ ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ ನಮ್ಮ ಗೃಹ ಇಲಾಖೆಯ

ಪ್ರಧಾನ ಕಾರ್ಯದರ್ಶಿಯವರ ನೇತೃತ್ವದಲ್ಲಿ ಪ್ರತಿ ತಿಂಗಳು ರೆವ್ಯೂ ಸಿಟಿಂಗ್ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಈಗ ಏನಾಗುತ್ತಿದೆ ಎಂದರೆ, ಒಂದೆರಡು ಸಲ ಇಂತಹ ಘಟನೆ ನಡೆದಾಗ ನೋಡಿಕೊಳ್ಳುವುದಾಗುತ್ತಿದೆ. ಬೆಳೆಯುತ್ತಿರುವ ಈ ನಗರದಲ್ಲಿ ಸುಮಾರು ಫ್ಲೋಟಿಂಗ್ ಜನಸಂಖ್ಯೆ ಎಲ್ಲಾ ಸೇರಿ ಸುಮಾರು 85 ಲಕ್ಷ ಜನರಿದ್ದಾರೆ. ಇಂತಹ ಘಟನೆಗಳು ನಡೆದಾಗ ಮತ್ತೆ ಇಂತಹವುಗಳು ಮರುಕಳಿಸಬಾರದೆಂದು ನಮ್ಮ ಗೃಹ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ನೇತೃತ್ವದಲ್ಲಿ ಪ್ರತಿ ತಿಂಗಳು ಕ್ರೈಮ್ಸ್ ಬಗ್ಗೆ ರೆವ್ಯೂ ಮಾಡಿ ಎಲ್ಲೆಲ್ಲಿ ನೂನ್ಯತೆ ಇದೆ ಅದನ್ನೂ ಕೂಡ ಸರಿಪಡಿಸುವ ಕೆಲಸವನ್ನು ಮಾಡುತ್ತಿದ್ದೇವೆ. ಡೋರ್ ಟು ಡೋರ್ ಸರ್ವೆ ಮಾಡಬೇಕೆಂದು ಹಿಂದೆಯೂ ಆದೇಶ ಕೊಟ್ಟಿದ್ದೆವು, ಅವರವರ ಸರಹದ್ದಿನಲ್ಲಿ ಎಲ್ಲಾ ಪೋಲಿಸ್ ಠಾಣೆಗಳಿಗೆ, ಹೊರಗಿನಿಂದ ಜನರು ಬಂದು ಇಂತಹ ಕೃತ್ಯಗಳೇನು ಮಾಡುತ್ತಿದ್ದಾರೆ ಅದನ್ನು ತಡೆಗಟ್ಟಲು ಪುನಃ ಸರ್ವೆ ಮಾಡಬೇಕೆಂದು ಹೇಳಿದ್ದೇವೆ. ಅದನ್ನು ಮಾಡುತ್ತಿದ್ದಾರೆ. ಇನ್ನು ಬಿಗಿ ಮಾಡಬೇಕೆನ್ನುವ ದೃಷ್ಟಿಯಿಂದ ಆ ಲೆಕ್ಯಾಲಿಟಿನಲ್ಲಿ ಹೊಸ ಜನರು ಬಂದಾಗ ಯಾರಿದ್ದಾರೆಂಬುದನ್ನೂ ಕೂಡ ಕಂಡುಹಿಡಿಯಬೇಕೆಂದು ಅವರಿಗೆ ಕಟ್ಟುನಿಟ್ಟಿನ ಒಂದು ಆದೇಶವನ್ನು ಕೊಡುತ್ತೇನೆ, ಹಿಂದೆಯೂ ಕೊಟ್ಟಿದ್ದೇನೆ, ಪುನಃ ಖುದ್ದಾಗಿ ಪರಿಶೀಲಿಸಿ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆಂದು ಪರಿಶೀಲಿಸುವ ಕೆಲಸವನ್ನೂ ಕೂಡ ನಾನು ಮಾಡುತ್ತೇನೆ. ಸೈಬರ್ ಹುಡ್ ಸ್ಕೀಂ ಅನ್ನು ಮಾಡಿದ್ದೇವೆ, ನಮ್ಮ ಶಾಸಕರಾದ ಸುರೇಶ್ ಕುಮಾರ್ ಪ್ರದೇಶ ಕಡೆ ಸೇರಿದಂತೆ ಕೆಲವು ಕಡೆ ಯಶಸ್ವಿಯಾಗಿದೆ, ಆದರೆ ದಕ್ಷಿಣ ಭಾಗದಲ್ಲಿ ಆದಾಗುತ್ತಿಲ್ಲ. ಏಕೆ ಆಗುತ್ತಿಲ್ಲವೆನ್ನುವುದರ ಬಗ್ಗೆ ನಾನು ಕೂಲಂಕುಷವಾಗಿ ವಿಚಾರಣೆ ನಡೆಸಿ ಯಾರಾದರೂ ತಪ್ಪಿತಸ್ಥ ಅಧಿಕಾರಿಗಳಿದ್ದಾರೆ ಅವರ ಮೇಲೂ ಕ್ರಮ ಜರುಗಿಸಲಾಗುವುದು, ಮತ್ತೆ ಯಾರೂ ಕೆಲಸ ಮಾಡಲು ಆಸಕ್ತಿ ಇಲ್ಲ ಅಂತಹವರಿಗೆ ನಿಮ್ಮ ಸೇವೆ ಇಲ್ಲಿ ಅಗತ್ಯವಿಲ್ಲವೆಂದು ಮನೆಗೆ ಕಳುಹಿಸುವಂತಹ ಕೆಲಸವನ್ನು ಕೂಡ ಮಾಡುತ್ತೇವೆ. ಹೀಗೆ ನಾವು ದಿಟ್ಟ ಹೆಜ್ಜೆಯನ್ನು ಇಡುವ ಕೆಲಸವನ್ನು ಮಾಡುತ್ತೇವೆ, ಅದಕ್ಕೆ ಜನರು ಭಯಭೀತರಾಗುವ ಅವಶ್ಯಕತೆ ಇಲ್ಲ. ನಾನು ಈ ಸದನದ ಮುಖಾಂತರ ಬೆಂಗಳೂರಿನ ನಾಗರೀಕರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ ಅವರು ಗಾಬರಿಪಡತಕ್ಕಂಥ ಅವಶ್ಯಕತೆ ಇಲ್ಲ, ಸರ್ಕಾರ ಎಲ್ಲಾ ಕ್ರಮವನ್ನು ಜರುಗಿಸುವುದು, ಅವರ ರಕ್ಷಣೆಗೆ ಬರುತ್ತದೆ, ಇಂತಹ ತೊಂದರೆಗಳು ಎಲ್ಲೆಲ್ಲಿ ಇವೆ ಅವನ್ನು ನಿವಾರಣೆ ಮಾಡಲು ಪೋಲಿಸ್‌ನವರು ಎಲ್ಲಾ ಕ್ರಮವನ್ನು ಜರುಗಿಸುತ್ತಾರೆ, ಎಲ್ಲಿ ಸುಳಿವು ಕಂಡು ಬಂದರೆ ತಕ್ಷಣ ಪೋಲಿಸರು ತಮ್ಮ ಕಾರ್ಯಾಚರಣೆಯನ್ನು ಮಾಡುತ್ತಾರೆ ಎಂದು ಹೇಳುತ್ತೇನೆ. ಇವತ್ತು ಏನೊಂದು ಘಟನೆಯನ್ನು ನನ್ನ ಗಮನಕ್ಕೆ ತಂದಿದ್ದೀರಿ, ಈ ಸಂದರ್ಭದಲ್ಲಿ ಇಷ್ಟನ್ನು ಮಾತ್ರ ಹೇಳುತ್ತೇನೆ, ಜನರ ವಿಶ್ವಾಸಗಳಿಸಲು ಅವರ ರಕ್ಷಣೆ ಮಾಡಲು ಸರ್ಕಾರ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವೆಲ್ಲವನ್ನು ಜರುಗಿಸುತ್ತೇವೆಂದು ಹೇಳುತ್ತೇನೆ. ಜನರು ಭಯಗೊಳ್ಳದಿರುವ ವಾತಾವರಣವನ್ನು ಸೃಷ್ಟಿಮಾಡಬೇಕಾದರೆ ನಾವು ನೀವು ಮಾಧ್ಯಮದ ಎಲ್ಲಾ ಮಿತ್ರರು ಸಹಕರಿಸಿದಾಗ ಮಾತ್ರ

34- A

ಸ್ವಲ್ಪ ಸಾಧ್ಯವಾಗುತ್ತದೆ. ನಾವು ಯಾರನ್ನು ದೂಷಿಸುತ್ತಿಲ್ಲ, ಆದರ ಅವಶ್ಯಕತೆಯೂ ಇಲ್ಲ. ಏನು ಬಂದರೆ ನಾನು ತೆಗೆದುಕೊಳ್ಳುವುದಕ್ಕೆ ತಯಾರಿದ್ದೇನೆ, ಒಳ್ಳೆಯ ಕೆಲಸವಾಗಿದ್ದರೆ ಸರಿ ಇದೆ, ತಪ್ಪು ಮಾಡಿದರೆ ತಪ್ಪಿದೆ ಎಂದು ಹೇಳಿದರೆ, ತಿದ್ದಿಕೊಳ್ಳಲು ನಾವು ಸಿದ್ಧರಿದ್ದೇವೆ, ತಪ್ಪುಗಳು ಎಲ್ಲೆಲ್ಲಿ ಆಗುತ್ತವೆ ಅವನ್ನು ಸರಿಪಡಿಸಲು ನಮ್ಮ ಸರ್ಕಾರ ಸದಾ ಸಿದ್ಧವಿದೆ ಎಂದು ಹೇಳುತ್ತೇನೆ, ಹಾಗೆ ಈ ಸಂದರ್ಭದಲ್ಲಿ ನಮ್ಮ ಅಧಿಕಾರಿಗಳಿಗೆ ಎಚ್ಚರಿಕೆಯ ಮಾತುಗಳನ್ನು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್:— ತಾವು ಹೇಳಿದ್ದನ್ನು ಪೂರ್ತಿ ಒಪ್ಪಿಕೊಳ್ಳುತ್ತೇನೆ, ನೀವು ಗೃಹ ಮಂತ್ರಿಯಾಗಿ ಒಂದು ಕೆಲಸ ಮಾಡಬಾರದಾಗಿತ್ತು, ಒಂದು ಕೆಲಸ ಮಾಡಬೇಕಾಗಿತ್ತು. ಇದೇನೆಂದರೆ, ಬೆಳೆಯುತ್ತಿರುವ ಸಮಾಜದಲ್ಲಿ ನಡೆಯುತ್ತದೆ, ಮರ್ಡರ್ ರೇಪ್ ಇವೆಲ್ಲಾ ಸಹಜ ಪ್ರಕ್ರಿಯೆ ಎಂದು ಹೇಳಬಾರದಾಗಿತ್ತು.

ಶ್ರೀ ಮಲ್ಲಿಕಾರ್ಜುನ ಖರ್ಗೆ:— ನಾನು ಎಲ್ಲೂ ಯಾವ ಪತ್ರಿಕೆಯಲ್ಲೂ ಕೂಡ ಹಾಗೆ ಹೇಳಿಲ್ಲ, ಎಲ್ಲೂ ಪತ್ರಿಕಾ ಗೋಷ್ಠಿಯನ್ನು ಮಾಡಿಲ್ಲ, ಸಹಜವಾಗಿ ಮಾತನಾಡುವಾಗ ಈ ಮೆಟ್ರೊಪಾಲಿಟನ್ ಸಿಟಿಗಳಲ್ಲಿ ಇಂತಹ ಘಟನೆಗಳು ನಡೆಯುತ್ತವೆ ಎಂದು ಹೇಳಿದ್ದೇನೆ. ಅವರು, ನೀವು ಸಮರ್ಥನೆ ಮಾಡಿದಿರಿ, ನೀವೇ ಹೀಗೆ ಹೇಳಿಕೆ ಕೊಟ್ಟರೆ ಹೇಗೆ? ಎಂದೆಲ್ಲಾ ಬಂದಿದೆ, ನಾನಂತೂ ಈ ಬಗ್ಗೆ ಅನೇಕ ಸಾರಿ ಹೇಳಿಕೆ ಪ್ರಯತ್ನಗಳನ್ನು ಮಾಡುತ್ತೇವೆ. ಬೆಂಗಳೂರು ನಗರ, ಇಡೀ ನಮ್ಮ ದೇಶದ ಜನತೆಯ ಮೆಚ್ಚುಗೆಗೆ ಪಾತ್ರವಾಗಿ ಎಲ್ಲಾ ಜನರು ಇಲ್ಲಿ ವಾಸ ಮಾಡಲು ಬರುತ್ತಿದ್ದಾರೆ, ಕೇಂದ್ರ ಸರ್ಕಾರ ಕೂಡ ಅನೇಕ ಸಂದರ್ಭಗಳಲ್ಲಿ ನಮ್ಮ ಕೆಲಸಗಳಿಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ, ಅದು ಬಾಂಬ್ ಬ್ಲಾಸ್ಟ್ ಇರಬಹುದು, ಸಕಲಿ ನೋಟುಗಳಿರಬಹುದು, ದಂಡುಪಾಳ್ಯ ಗ್ಯಾಂಗ್ ಹಿಡಿಯುವುದರಲ್ಲಿ ಇರಬಹುದು, ಅಸ್ಕೋಟಿಕರ್ ಕೇಸ್ ಬಗ್ಗೆ ಹೇಳಬಹುದು. ಹೀಗೆ ಒಂದಲ್ಲ ಹತ್ತಾರು ಉದಾಹರಣೆಗಳನ್ನು ನಾನು ಹೇಳಬಹುದು ಇವೆಲ್ಲಾ ಮಾಡಿದರೂ ಕೂಡ ನಮಗೆ ಶಭಾಷ್‌ಗಿರಿ ಇಲ್ಲ. ಆದರೆ ಒಂದು ಸ್ವಲ್ಪ ಎಲ್ಲಾದರ ತಪ್ಪಾದರೂ ಸಿಂಧ್ಯಾರವರರ ಚಮಚಾನು ನಮ್ಮ ಮೇಲೆ, ಸುರೇಶ್ ಕುಮಾರ್‌ರವರ ಬಡಿಗಿಯೂ ನಮ್ಮ ಮೇಲೆ ಬೀಳುತ್ತದೆ. ನಾವು ಸ್ವಲ್ಪ ಒಳ್ಳೆಯ ಕೆಲಸವನ್ನು ಮಾಡಿದ್ದನ್ನು ಹೇಳಿ, ತಪ್ಪಾಗಿರುವುದನ್ನು ತಿದ್ದಿಕೊಳ್ಳುವ ಪ್ರಯತ್ನ ಮಾಡುತ್ತೇವೆ. ಆದರೆ ಆ ಧಾಟಿಯಲ್ಲಿ ಹೇಳುವ ಸ್ವಭಾವ ನನ್ನದಲ್ಲ, ನಾನು ಹೇಳುವುದೂ ಇಲ್ಲ, ಆದರೆ ನಾನು ಸಂದರ್ಭ ಹೀಗಿರುವಾಗ ನಾನು ಮಾತನಾಡುವ ಸಂದರ್ಭದಲ್ಲಿ ಇಷ್ಟು ಮಾತ್ರ ಅದನ್ನು ಉಪಯೋಗಿಸಿಕೊಂಡಿದ್ದನೆಯೇ ಹೊರತು, ಅದಕ್ಕೆ ತಿರುಚಿ ಮುರುಚಿ ಬರೆದಿದ್ದೇ ಬರೆದಿದ್ದು, ಹೇಳಿದ್ದೇ ಹೇಳಿದ್ದು, ಅದರ ಮೇಲೆ ವ್ಯಾಖ್ಯಾನ ಮಾಡಿದ್ದೇ ಮಾಡಿದ್ದು. ಇವತ್ತೂ ಕೂಡ ನಾನು ನೋಡಿದೆ. ಆದರೆ ಅನೇಕ ಪತ್ರಿಕೆಗಳ ಮೇಲೆ ಜನ ದಂಡುದಾಳಿ ಮಾಡಿದಾಗ ರಕ್ಷಣೆ ಕೊಟ್ಟಿದ್ದನ್ನು ಯಾರೂ

ಹೇಳಲಿಲ್ಲ, ಬಾಂಬೆ ಬ್ಲಾಸ್ಟ್ ಬಗ್ಗೆ, ನಕಲಿ ನೋಟುಗಳ ಪತ್ತೆ ಬಗ್ಗೆ, ಸ್ಟ್ಯಾಂಪ್ ಪೇಪರ್ ಬಗ್ಗೆ, ಹಳೆಯ ವಸ್ತುಗಳನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಿದ್ದನ್ನು ಪತ್ತೆ ಹಚ್ಚಿದ್ದು ಹೀಗೆ ಹಲವಾರು ಒಳ್ಳೆಯ ಕೆಲಸಗಳನ್ನು ಮಾಡಿದ್ದರ ಬಗ್ಗೆ ಯಾರೂ ಹೇಳಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಎಲ್ಲಾ ವಿಚಾರಗಳಲ್ಲೂ ಕೆಲವರು ಎಡಿಟೋರಿಯಲ್ ಬರೆದು ಸ್ವಾಗತ ಮಾಡಿದ್ದಾರೆ, ಏಕೆ ನೀವು ಹೀಗೆ ಹೇಳುತ್ತಿದ್ದೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಾನು ಅವರಿಗೆ ಹೇಳಲಿಲ್ಲ, ಹೊಗಳಲಿಲ್ಲವೆಂದು ನಿಮಗೆ ಹೇಳಿದೆ.

ಶ್ರೀ ಎಸ್. ಸುರೇಶ್ ಕುಮಾರ್ :— ಮೊನ್ನೆ ಬೆಂಗಳೂರಿನಲ್ಲಿ ಕೊಲೆಯಾಯಿತು ನೀವು ಆ ಸ್ಥಳಕ್ಕೆ ಒಂದು ಸಾರಿ ಹೋಗಿದಿದ್ದರೆ ರೈಟ್ ಸಿಗ್ನಲ್ ಹೋಗುತ್ತಿತ್ತು, ಅಧಿಕಾರಿಗಳಿಗೂ ಕೂಡ ಒಂದು ಎಚ್ಚರಿಕೆ ಬರುತ್ತಿತ್ತು, ಇದು ನನ್ನ ಅನಿಸಿಕೆ, ಅದನ್ನು ನೀವು ಒಪ್ಪಿಕೊಳ್ಳದಿರಬಹುದು. ಮತ್ತೆ ಪೋಲಿಸ್ ಉನ್ನತಾಧಿಕಾರಿಗಳಲ್ಲಿ ಏನು ಗುಂಪುಗಾರಿಕೆ ಇದೆ ಅದರಿಂದ ಇವತ್ತು ಅಪರಾಧ ತಡೆಗಟ್ಟಲು ತೊಂದರೆಯಾಗುತ್ತಿದೆ, ಅದನ್ನು ನಿಲ್ಲಿಸದಿದ್ದರೆ ನಾವೇನು ಇವತ್ತು ಆತಂಕವನ್ನು ವ್ಯಕ್ತಪಡಿಸಿದ್ದೇವೆ ಅದು ನಿಜವಾಗುವ ಪರಿಸ್ಥಿತಿ ಎಲ್ಲಾ ಕಡೆ ಬಂದೇ ಬರುತ್ತದೆ.

(ಅ) ಮೈಸೂರು, ಮಂಡ್ಯ, ಚಾಮರಾಜನಗರದಲ್ಲಿ ಕರಳುಬೇನೆ ಹಬ್ಬುತ್ತಿರುವ ಬಗ್ಗೆ.

+ಶ್ರೀ ಬಿ.ಸೋಮಶೇಖರ್ (ಮಳವಳ್ಳಿ) ಮಾನ್ಯ ಅಧ್ಯಕ್ಷರೆ, ಮೈಸೂರು, ಮಂಡ್ಯ, ಚಾಮರಾಜನಗರ ಈ ಭಾಗದಲ್ಲಿ ಕರಳುಬೇನೆ ಬಂದು ಸುಮಾರು ನಾಲ್ಕೈದು ಜನರು ಸತ್ತಿರುವುದು ವರದಿಯಾಗಿದೆ. ಮೊನ್ನೆ ನಮ್ಮ ಮಳವಳ್ಳಿಯಲ್ಲೂ ಕೂಡ ಹಾವು ಕಡಿದು ಒಬ್ಬರು ಸತ್ತಿದ್ದಾರೆ. ಆಸ್ಪತ್ರೆಗಳಲ್ಲಿ ಏನಾಗಿದೆ ಎಂದರೆ ಸರಿಯಾಗಿ ಔಷಧಿಗಳಿಲ್ಲ, ವೈದ್ಯರುಗಳಿಲ್ಲ, ಹೀಗಾಗಿ ಚಿಕಿತ್ಸೆಯನ್ನು ಸರಿಯಾಗಿ ಕೊಡದೆ ಮಳವಳ್ಳಿ ಆಸ್ಪತ್ರೆಯಲ್ಲಿ ಒಬ್ಬರು ಸತ್ತಿದ್ದಾರೆ. ನೀರು ಸರಿಯಾಗಿಲ್ಲದೆ ಅದನ್ನು ಕುಡಿದು ಕರಳುಬೇನೆ ರೋಗದಿಂದ 5-6 ಜನ ಸತ್ತಿರುವುದು ನಾನು ಹೇಳಿದ ಭಾಗಗಳಲ್ಲಿ ಆಗಿದೆ. ಆಸ್ಪತ್ರೆಗಳಲ್ಲಿ ಯಾವುದೇ ರೀತಿಯಾದ ಚಿಕಿತ್ಸೆ ಸಿಗುತ್ತಿಲ್ಲ, ವೈದ್ಯರುಗಳಿಲ್ಲ, ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ. ಕೊಳ್ಳೇಗಾಲ, ಮಳವಳ್ಳಿ, ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು ಈ ಭಾಗದಲೆಲ್ಲಾ ಅದು ಹಬ್ಬುತ್ತಿದೆ.

ಶ್ರೀ ಹೆಚ್.ಎಸ್. ಮಹಾದೇವ ಪ್ರಸಾದ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ನಮ್ಮ, ಚಾಮರಾಜನಗರ ಜಿಲ್ಲೆ ಕೆಸ್ತೂರು ಗ್ರಾಮದಲ್ಲಿ ಕರಳುಬೇನೆ ರೋಗದಿಂದ ಈಗಾಗಲೇ ನಾಲ್ಕು ಜನ ಮೃತರಾಗಿದ್ದಾರೆ. ಕೊಳ್ಳೇಗಾಲ ತಾಲ್ಲೂಕಿನ ಹಾಮಗೆರೆ ಮುಂತಾದ ಅಕ್ಕಪಕ್ಕದ ಗ್ರಾಮಗಳಲ್ಲಿ, ಚಾಮರಾಜನಗರ ತಾಲ್ಲೂಕಿನ ಹರಪನಹಳ್ಳಿ,

ಅರಕಲವಾಡಿ, ಹಾಗಲವಾಡಿ ಗ್ರಾಮಗಳಲ್ಲಿ ಕರಳುಬೇನೆ ಬಂದು ಸುಮಾರು 30 ರಿಂದ 40 ಜನರು ನರಳುತ್ತಿದ್ದಾರೆ. ಹಾಗೆಯೇ ಇದು ಕೊಳ್ಳೇಗಾಲ, ಚಾಮರಾಜನಗರ ಮತ್ತು ಯಳಂದೂರು ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಹಬ್ಬುತ್ತಿದೆ. ಇದರ ಬಗ್ಗೆ ಜಿಲ್ಲಾ ಪರಿಷತ್ ನವರು ಸೂಕ್ತವಾದಂಥ ವ್ಯವಸ್ಥೆಯನ್ನು ಕೈಗೊಳ್ಳದಿರುವುದರಿಂದ ಈ ರೋಗ ಉಲ್ಬಣವಾಗುವಂಥ ಪರಿಸ್ಥಿತಿಯಿದೆ. ಜೊತೆಗೆ ಸರಿಯಾಗಿ ಆರೋಗ್ಯ ತಪಾಸಣೆಯನ್ನು ಮಾಡುವುದಕ್ಕೆ ವೈದ್ಯಕೀಯ ವ್ಯವಸ್ಥೆ ಕೂಡ ಇಲ್ಲದಿರುವುದರಿಂದ ಇದು ಹೆಚ್ಚಾಗುತ್ತಿದೆ. ಕೂಡಲೆ ಈ ರೋಗವನ್ನು ತಡೆಗಟ್ಟುವುದಕ್ಕೆ ಸರ್ಕಾರ ಮುಂದಾಗಬೇಕು. ಕುಡಿಯುವ ನೀರು ಶುದ್ಧಗೊಳ್ಳುವ ಸಲುವಾಗಿ ಬ್ಲೀಚಿಂಗ್ ಪೌಡರ್ ಏನು ಹಾಕಬೇಕೋ ಅದನ್ನು ಸಮರ್ಪಕವಾಗಿ ಮಾಡದೇ ಇರುವುದರಿಂದ ಈ ರೋಗ ಹಾಣಸಿಕೊಳ್ಳುತ್ತಿದೆ ಜೊತೆಗೆ ನೀರಿನ ಪೈಪಿನೊಳಗೆ ಪಾಚಿ ಕಟ್ಟಿಕೊಂಡಿರುವುದರಿಂದ ಅದನ್ನು ಸರಿಪಡಿಸದೆ ನೀರು ಸರಬರಾಜು ಮಾಡುತ್ತಿರುವುದು ಹಾಗೂ ಒಡೆದು ಹೋಗಿರುವ ಪೈಪಿನೊಳಗೆ ಚರಂಡಿ, ಗಲೀಜು ನೀರು ಸೇರಿ ಅದನ್ನು ಜನರು ಕುಡಿಯುವುದರಿಂದ ಈ ರೋಗಕ್ಕೆ ಕಾರಣವಾಗಿದೆ. ಇದು ಎಲ್ಲೆಲ್ಲಿ ಹಾಣಸಿಕೊಂಡಿದೆ ಅಲ್ಲಿಗೆ ತುರ್ತಾಗಿ ಔಷಧಿಯನ್ನು ಕಳುಹಿಸಿ ರೋಗವನ್ನು ತಡೆಗಟ್ಟದಿದ್ದರೆ ಎಲ್ಲಾ ಜಿಲ್ಲೆಯಾದ್ಯಂತ ಹಬ್ಬುವಂಥ ಪರಿಸ್ಥಿತಿ ಉಂಟಾಗುವುದಕ್ಕೆ ಮೊದಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :— ಮಾನ್ಯ ಅಧ್ಯಕ್ಷರೆ, ಕರಳು ಬೇನೆ ರೋಗ ಹಬ್ಬುತ್ತಿದೆ ಮತ್ತು ಆಸ್ಪತ್ರೆಯಲ್ಲಿ ಸರಿಯಾದ ವ್ಯವಸ್ಥೆ ಇಲ್ಲವೆಂದು ಶ್ರೀಯುತರುಗಳಾದ ಸೋಮಶೇಖರ್ ಮತ್ತು ಮಹದೇವ ಪ್ರಸಾದ್ ಅವರು ಹೇಳಿದರು. ಇದರಲ್ಲಿ 50 ಪರ್ಸೆಂಟ್ ಜವಾಬ್ದಾರಿ ಅವರದ್ದು ಇದೆ ಮತ್ತು 50 ಪರ್ಸೆಂಟ್ ಜವಾಬ್ದಾರಿ ನನ್ನ ಇಲಾಖೆಯದ್ದು ಇದೆ. ಏಕೆಂದರೆ ಸ್ವಚ್ಛ ನೀರನ್ನು ಕೊಡುವಂಥ ವ್ಯವಸ್ಥೆಯನ್ನು ಆರೋಗ್ಯ ಇಲಾಖೆ ಮಾಡುವುದಿಲ್ಲ. ನಗರಸಭೆಯಲ್ಲಿ ಇದ್ದರೆ ನಗರಸಭೆಯವರು ಮಾಡಬೇಕು, ಗ್ರಾಮಾಂತರ ಪ್ರದೇಶದಲ್ಲಿ ಆದರೆ ಜಿಲ್ಲಾಪಂಚಾಯತ್‌ನವರು ಮಾಡುತ್ತಾರೆ. ಜಿಲ್ಲಾಪಂಚಾಯತ್ ನಲ್ಲಿ ಮತ್ತು ನಗರಸಭೆಯಲ್ಲಿ ಕೂಡ ಎಕ್ಸ್-ಅಫಿಶಿಯೋ ಮೆಂಬರ್ ಇರುತ್ತಾರೆ. ಅವರನ್ನು ಸ್ವಲ್ಪ ಕಾರ್ಯೋನ್ಮುಖವಾಗಿ ತಾವು ಮಾಡಬೇಕು. ಇನ್ನು ಆಸ್ಪತ್ರೆಗಳಲ್ಲಿ ಅವ್ಯವಸ್ಥೆ ಇದೆಯೆಂದು ಮಾನ್ಯ ಸದಸ್ಯರು ಹೇಳಿದರು. ಯಾವ ಯಾವ ಆಸ್ಪತ್ರೆಯಲ್ಲಿ ಅವ್ಯವಸ್ಥೆ ಯಾವ ಯಾವುದು ಇದೆ ಎಂಬುದನ್ನು ತಾವು ಹೇಳಿದರೆ 24 ಗಂಟೆಯೊಳಗೆ ಯಾವ ಆಸ್ಪತ್ರೆಯಲ್ಲಿ ಔಷಧಿ ಇಲ್ಲ ಅಲ್ಲಿಗೆ ನಾನು ಔಷಧಿಯನ್ನು ರವಾನೆ ಮಾಡಲಿಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :— ಮಾನ್ಯ ಅಧ್ಯಕ್ಷರೇ, ಅಲ್ಲಿಯ ಜಿಲ್ಲಾ ಪರಿಷತನ್‌ನವರು ನೀರಿನ ಬಗ್ಗೆ ದೂರು ಹೇಳಿ ಅವರು ತಮ್ಮ ಜವಾಬ್ದಾರಿಯಿಂದ

ನುಣುಚಿಕೊಳ್ಳತ್ತಿದ್ದಾರೆ. ಆದ್ದರಿಂದ ಆರೋಗ್ಯ ಇಲಾಖೆಯವರು ವಿಶೇಷವಾದ ಆಸಕ್ತಿಯನ್ನು ತೆಗೆದುಕೊಂಡು ಜಿಲ್ಲಾಪರಿಷತ್ತಿನ ಇಂಜಿನಿಯರಿಂಗ್ ವಿಭಾಗಕ್ಕೆ ಅವೇರ್‌ನೆಸ್ ಕ್ರಿಯೇಟ್ ಮಾಡಬೇಕು. ಇಲ್ಲದಿದ್ದರೆ ಅದು ಮಾಮೂಲಿಯ ರೀತಿಯಲ್ಲಿ ನಡೆದುಕೊಂಡು ಹೋಗುತ್ತಿರುತ್ತದೆ.

(ಇ) ದಕ್ಷಿಣ ಕನ್ನಡ ಜಿಲ್ಲೆಯ ಸಜಿಪಮನ್ನೂರು ಗ್ರಾಮದಲ್ಲಿ ಬಾಲಕಿಯು ವಿದ್ಯುತ್ ವೈರ್ ತುಳಿತದಿಂದ ಮೃತಪಟ್ಟ ಕುಟುಂಬದವರಿಗೆ ಪರಿಹಾರ ನೀಡುವ ಬಗ್ಗೆ.

+ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಸಜಿಪಮನ್ನೂರು ಗ್ರಾಮದಲ್ಲಿ ಸುಮಾರು 7 ವರ್ಷದ ಮರಿಯಮ್ಮ ಯಾನೆ ಮಿಸ್ರಿ ಎಂಬು ಹುಡುಗಿ ಮದರಸದಿಂದ ಮನೆಗೆ ಹೋಗುವಾಗ ದಾರಿಯಲ್ಲಿ ಬಿದ್ದಿದ್ದಂಥ ವಿದ್ಯುತ್ ವೈರ್‌ನ್ನು ತುಳಿದಾಗ ವಿದ್ಯುತ್ ಅಘಾತವಾಗಿ ಇಡೀ ಅರ್ಧ ದೇಹ ಬೆಂದುಹೋಗಿರುತ್ತದೆ. ಈ ಹೈ-ಟೆನ್‌ಷನ್ ವೈರ್ ಏಕೆ ಬಿದ್ದಿರುತ್ತದೆ ಎಂದರೆ 10 ಎಂ.ಎಂ.ದಪ್ಪದ ವೈರ್ ಹಾಕುವ ಬದಲಾಗಿ 6 ಎಂ.ಎಂ. ದಪ್ಪದ ವೈರ್ ಹಾಕಿರುವುದರಿಂದ ವೈರ್ ಕಟ್ಟಾಗಿ ಕೆಳಗೆ ಬಿದ್ದಿದೆ ಎನ್ನುವ ವರದಿ ಇದೆ. ಆ ಹುಡುಗಿಯನ್ನು ತುರ್ತು ಚಿಕಿತ್ಸಾ ವಿಭಾಗಕ್ಕೆ ತೆಗೆದುಕೊಂಡು ಹೋಗಿ ಚಿಕಿತ್ಸೆ ಕೊಡುವಾಗ ಇಡೀ ಬೆಂದ ಬಲಗೈಯನ್ನು ಕತ್ತರಿಸಬೇಕಾಗುತ್ತದೆ. ಎಡಗೈ ಬೆರಳನ್ನು ಈಗಾಗಲೇ ಕತ್ತರಿಸಿದ್ದಾರೆ. ಈ ಹುಡುಗಿಯ ತಂದೆ ಅಬ್ದುಲ್ ರೆಹಮಾನ್ ಎನ್ನುವ ಕಾರು ಚಾಲಕ. ನರಳಾಡುತ್ತಿರುವಂಥ ಈ ಹುಡುಗಿಗೆ ಯಾವುದೇ ರೀತಿಯಲ್ಲಿ ವೈದ್ಯಕೀಯ ನೆರವನ್ನು ಕೊಡುವ ಸ್ಥಿತಿಯಲ್ಲಿ ಇಲ್ಲದಿರುವಂಥ ಒಬ್ಬ ವ್ಯಕ್ತಿ. ಇಂಥ ಪರಿಸ್ಥಿತಿಯಲ್ಲಿ ನೀವು ನೆರವನ್ನು ಕೊಡಬೇಕೆಂದು ಕೆ.ಪಿ.ಟಿ.ಸಿ.ಎಲ್.ರವರನ್ನು ವಿಚಾರಿಸಿದಾಗ ಅಲ್ಲಿಂದ ಈ ಹುಡುಗಿಯ ವೈದ್ಯಕೀಯ ಖರ್ಚಿನ ಸಲುವಾಗಿ ಬಂದಿರುವುದು ಕೇವಲ 27 ಸಾವಿರ ರೂ.ಗಳು ಮಾತ್ರ. ಮುಖ್ಯಮಂತ್ರಿಗಳ ಪರಿಹಾರಧನದಿಂದ ರೂ. 10 ಸಾವಿರ ಬಂತು. ವೈದ್ಯಕೀಯ ಖರ್ಚಿನ ಸಂಬಂಧ ಸುಮಾರು ರೂ. 2 ಲಕ್ಷದಷ್ಟಕ್ಕೆ ಬಿಲ್ ಬಂದಿದೆ. ಆದರೆ ಯಾವುದೇ ನೆರವನ್ನು ಕೊಡುವ ದೃಷ್ಟಿಯಿಂದ ಕೆ.ಪಿ.ಟಿ.ಸಿ.ಎಲ್. ಮುಂದಾಗಿಲ್ಲ. ಕೆ.ಪಿ.ಟಿ.ಸಿ.ಎಲ್.ನ ಅಧ್ಯಕ್ಷರನ್ನು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕ ಮಾಡಿದಾಗ- ದಿವಸಕ್ಕೆ ಮೂರು ಅಕ್ಸಿಡೆಂಟ್‌ಗಳು ಆಗುತ್ತದೆ, ನಾವು ಎಷ್ಟು ಜನರಿಗೆ ಪರಿಹಾರ ಕೊಡುವುದು, ಯಾವ ರೀತಿ ಕೊಡಬಹುದು, ನಮ್ಮ ಕಾನೂನಿನ ನಿಬಂಧನೆಯಲ್ಲಿ ನಮ್ಮಲ್ಲಿಂದ ಪರಿಹಾರ ಕೊಡುವ ಪ್ರಾವಿಜನ್ ಇಲ್ಲ ಎಂದು ಹೇಳುವಂಥ ಮಾತನ್ನು ಆಡಿದ್ದಾರೆ. ಇದಕ್ಕೆ ಸಂಬಂಧಪಟ್ಟ ಹಾಗೆ ಕರ್ನಾಟಕ ಎಲೆಕ್ಟ್ರಿಸಿಟಿ ರೆಗ್ಯುಲೇಟರಿ ಕಮಿಷನ್ ಇದೆ. ಅದರ ಪ್ರಮುಖರನ್ನು ಸಂಪರ್ಕ ಮಾಡಿದಾಗ ನಾವು ಪರಿಶೀಲಿಸುತ್ತೇವೆಂದು ಹೇಳಿದರು. ಅದರ ನಂತರ ಅವರಿಂದ ನನಗೆ ಒಂದು ಪತ್ರ ಬಂದಿದ್ದು ಅದು ಹೀಗಿದೆ.

'ಮೇಲ್ಕಂಡ ತಮ್ಮ ಪತ್ರ ತಲುಪಿತು. ಕೋರ್ಟಿನ ತಡೆಯಾಜ್ಞೆ ಇರುವುದರಿಂದ ನಾವು ಯಾವುದೇ ರೀತಿಯ ನಿರ್ದೇಶನವನ್ನು ಕೆ.ಪಿ.ಟಿ.ಸಿ.ಎಲ್.ಗೆ ನೀಡಲು ಬಾರದೇ ಇರುವ ಪ್ರಯುಕ್ತ...'

ಅಂದರೆ ನಿರ್ದೇಶನ ಕೊಡಲಿಕ್ಕೆ ಸಾಧ್ಯವಾಗುತ್ತಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಹಾಗಾದರೆ ಇದಕ್ಕೆ ಪರಿಹಾರವನ್ನು ಯಾರು ಕೊಡಬೇಕು? ಇಂಥ ಅಪಘಾತದ ಘಟನೆಗಳು ನಿರಂತರವಾಗಿ ಬೇರೆ ಬೇರೆ ಕಡೆಗಳಲ್ಲಿ ಆಗುತ್ತಿದೆ. ಕನಿಷ್ಟ ವೈದ್ಯಕೀಯ ಚಿಕಿತ್ಸಾ ಶುಲ್ಕವನ್ನು ತಕ್ಷಣ ಕೊಡುವ ವಿಚಾರದಲ್ಲಿ ಕೆ.ಪಿ.ಟಿ.ಸಿ.ಎಲ್.ಗೆ ಹೊಣೆಗಾರಿಕೆಯನ್ನು ಕೊಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ. ಇಂಥ ಘಟನೆಗಳು ನಡೆದಂಥ ಸಂದರ್ಭದಲ್ಲಿ ಮಾನವೀಯ ನೆಲೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ತಕ್ಷಣ ಏನಾದರೂ ಪರಿಹಾರವನ್ನು ನೀಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತಾ, ಈ ನಿಟ್ಟಿನಲ್ಲಿ ನಾನು ರೆಫರ್ ಮಾಡಿದಂಥ ಕೇಸ್‌ಗೆ ತಾವು ತಕ್ಷಣ ಮಾನವೀಯ ನೆಲೆಯಲ್ಲಿ ಪರಿಹಾರವನ್ನು ಒದಗಿಸುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮೂಲಕ ವಿಶೇಷವಾಗಿ ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ವೀರಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, ಅಕ್ಸಿಡೆಂಟ್ ಆಗಿರುವುದು ನಿಜ. 27 ಸಾವಿರ ರೂಪಾಯಿಗಳನ್ನು ಆ ಫಲಾನುಭವಿಗೆ ಕೊಟ್ಟಿದ್ದೇವೆ. ಬೋರ್ಡ್‌ನಲ್ಲಿ ಕೆ.ಪಿ.ಟಿ.ಸಿ.ಎಲ್.ನವರು ರೆಸಲ್ಯೂಷನ್ ಮಾಡಿ ಒಟ್ಟು 81,907 ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆ. ಆ ಹಣವನ್ನು ಅವರಿಗೆ ವಿತರಿಸಲಾಗುವುದು.

ಶ್ರೀ ಎನ್. ಯೋಗೀಶ್ ಭಟ್ :— ಮಾನ್ಯ ಅಧ್ಯಕ್ಷರೆ, ಇಲ್ಲಿ ಏನಾಗುತ್ತಿದೆ ಎಂದರೆ ನೀವು ಕೋರ್ಟ್‌ಗೆ ಹೋಗಿ, ಪರಿಹಾರ ಕೊಡುವುದಕ್ಕೆ ಕೋರ್ಟಿನಿಂದ ಡೈರೆಕ್ಷನ್ ಬರಲಿ, ನಂತರ ಕೊಡುತ್ತೇವೆಂದು ಹೇಳುವಂಥ ಮಾತು ಕೆ.ಪಿ.ಟಿ.ಸಿ.ಎಲ್.ನಿಂದ ಬರುತ್ತಿದೆ. ದಯವಿಟ್ಟು ಅದಕ್ಕೆ ಅವಕಾಶ ಕೊಡಬೇಡಿ. 81 ಸಾವಿರ ರೂಪಾಯಿಗೆ ಸಂಬಂಧಪಟ್ಟ ಪ್ರಥಮ ಬಿಲ್ ಆಗಿರುತ್ತದೆ. ಅದರ ನಂತರ ಇನ್ನೊಂದು ಬಿಲ್ ಬಂದಿದೆ. ಅದಕ್ಕೆ ಪರಿಹಾರ ಕೊಡುವುದಕ್ಕೆ ಕೆ.ಪಿ.ಟಿ.ಸಿ.ಎಲ್. ಮುಂದೆ ಬರುತ್ತಿಲ್ಲ.

ಶ್ರೀ ವೀರಕುಮಾರ್ ಪಾಟೀಲ್ :— ಮಾನ್ಯ ಅಧ್ಯಕ್ಷರೆ, ಕೆ.ಇ.ಆರ್.ಸಿ. ಡೈರೆಕ್ಷನ್ ಪ್ರಕಾರ ಆಸ್ಪತ್ರೆಯಿಂದ ಏನು ಬಿಲ್ ಬಂದಿದೆ ಆ ಬಿಲ್ಸ್‌ನ ಹಣವನ್ನು ನಾವು ಸ್ಯಾಂಕ್ಷನ್ ಮಾಡಿದ್ದೇವೆ. ಆ ಅಮೌಂಟ್ ಕೊಡುತ್ತಿದ್ದೇವೆ.